ಥರ್ಡ್ ಸೆಮಿಸ್ಟಾರ್‌ನಲ್ಲಿ ಬ್ರಾಂಡ್ ಬದಲಾವಣೆಯಲ್ಲಿ ದೊಡ್ಡ ದಂಧೆಯಾಗಿದ್ದು, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದ್ದು, ಮ್ಯಾನೇಜ್‌ಮೆಂಟ ನವರು ಲೂಟಿ ಮಾಡುತ್ತಿದ್ದಾರೆ. ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಸರ್ಕಾರದ ಎಲ್ಲಾ ನೀತಿ ನಿಯಮ ಆದೇಶಗಳನ್ನು ಗಾಳಿಗೆ ತೂರಿ ಆಡಳಿತ ಮಂಡಳಿಯವರು ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ, ಆದರೆ ಸರ್ಕಾರ ಮಾತ್ರ ಕಣ್ಣು ಮುಚ್ಚಿಕೊಂಡು ಕೂತಿದೆ. ನಮ್ಮ ಸರ್ಕಾರ ಇದ್ದಾಗ 1996ರಲ್ಲಿ ನಾವು ಒಂದು ಆದೇಶವನ್ನು ಹೊರಡಿಸಿದ್ದವು. ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಫರ್ಸ್ಟ್ ಈಯರ್‌ನಿಂದ ಸೆಕೆಂಡ್ ಈಯರ್‌ಗೆ ಹೋದಾಗ ಸೆಕೆಂಡ್ ಈಯರ್‌ನಲ್ಲಿ ಕೆಲವು ಖಾಲಿ ಬಿದ್ದರೆ ಆದಕ್ಕೆ ಯಾವ ರೀತಿ ತುಂಬಬೇಕು. ಎಷ್ಟು ಖಾಲಿ ಇವೆ ಅಷ್ಟನ್ನು ಮಾತ್ರ ತುಂಬಬೇಕು, ಇವುಗಳನ್ನು ಮೆರಿಟ್ ಆಧಾರದ ಮೇಲೆ ತುಂಬಬೇಕು, ಒಂದು ಸೀಟನ್ನು ಹೆಚ್ಚಿಗೆ ಮಾಡತಕ್ಕಂಥದ್ದು ಆಗಬಾರದು, ಇವುಗಳೆಲ್ಲದರ ಮಾಹಿತಿ ತರಿಸಿಕೊಂಡು ಕಾಲೇಜಿನ ಪ್ರಾಂಶುಪಾಲರಾಗಲಿ ಆಥವಾ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಲಿ ಮಾಡಬೇಕೆಂದು ಆದೇಶ ಹೊರಡಿಸಿದ್ದೆವು. ಇದರ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಆರ್ಟಿಕಲ್ ಬಂದಿತು. "Engineering Colleges do brisk business" - "Intake overshoot as guidelines remain on paper" ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದನ್ನು ನಾನು ತರಿಸಿಕೊಂಡು ನೋಡಿದರೆ, 25-5-1996ರಲ್ಲಿ ಹೊರಡಿಸಿದ ಮಾರ್ಗಸೂಚಿಯನ್ನು ಗಾಳಿಗೆ ತೂರಿದ್ದಾರೆಂದು ಕಂಡುಬರುತ್ತದೆ. ಇವರು ಏನು ಮಾಡುತ್ತಾರೆಂದರೆ, ಫರ್ಸ್ಟಯಿಯರ್‌ಗೆ ಸಿವಿಲ್‌ನಲ್ಲಿ ಸೀಟು ಸಿಗುತ್ತದೆ. ಕಂಪ್ಯೂಟರ್ ಸೈನ್ಸ್ 90 ಪರ್ಸೆಂಟ್‌ಗೆ ಸಿಗತಕ್ಕಂಥದ್ದು ಸಿವಿಲ್ 55 ಪರ್ಸೆಂಟ್‌ಗೆ ಸಿಗುತ್ತದೆ. ಅವನು ಸೆಕೆಂಡ್‌ಈಯರ್‌ಗೆ ಹೋಗಬೇಕಾದರೆ 5 ರಿಂದ 15 ಲಕ್ಷದವರೆಗೆ ಕೊಡಬಹುದು. ಕಂಪ್ಯೂಟರ್‌ಗೆ ಸೇರಿಕೊಂಡು ಬಿಡುತ್ತಾನೆ, ಇದು ಯಾವುದೂ ಸೀಟಿ ವ್ಯಾಪ್ತಿಗೆ ಬರುವುದಿಲ್ಲ. ಸೀಟಿಗೆ ಕೇವಲ ಮೊದಲನೇ ವರ್ಷದ ಇಂಜಿನಿಯರ್, ಮೆಡಿಕಲ್, ಡೆಂಟಲ್, ಇವುಗಳು ಮಾತ್ರ ಬರುತ್ತವೆ. ನಂತರ ಸೆಕೆಂಡ್‌ಈಯರ್‌ನಲ್ಲಿ ಖಾಲಿ ಇರುವ ಜಾಗಗಳಿಗೆ ಯಾವ ರೀತಿ ತುಂಬುತ್ತಾರೆ ಎನ್ನುವುದು ಸೀಟಿ ವ್ಯಾಪ್ತಿಗೆ ಬರುವುದಿಲ್ಲ. ಇದನ್ನೆಲ್ಲಾ ನೋಡಿಕೊಂಡು ನಮ್ಮ ಸರ್ಕಾರ ಇದ್ದಾಗ ಏನು ಮಾರ್ಗಸೂಚಿ ಹೊರಡಿಸಿದ್ದವು ಆದನ್ನು ಇವತ್ತು ಇವರು ಗಾಳಿಗೆ ತೂರಿದ್ದಾರೆ. ಕಂಪ್ಯೂಟರ್ ಸೈನ್ಸ್‌ನ ಥರ್ಡ್ ಸೆಮಿಸ್ಟಾರ್‌ನಲ್ಲಿ 5 ವೇಕನ್ಸಿ ಇದ್ದರೆ ಇದಕ್ಕೆ ವಿರುದ್ಧವಾಗಿ 15, 20, ತುಂಬಿರತಕ್ಕಂಥದ್ದು ಇದೆ. ಹೀಗಾಗಿ ಎಐಸಿಟಿಇನವರು ಎಷ್ಟು ಇನ್‌ಟೇಕ್‌ಗಳನ್ನು ಮಂಜೂರಾತಿ ಮಾಡಿದ್ದಾರೆ ಅಷ್ಟು ಇನ್‌ಟೇಕ್ ಸೆಕೆಂಡ್‌ಈಯರ್‌ನಲ್ಲಿ ದ್ವಿಗುಣವಾಗುತ್ತದೆ. ಹೀಗಾಗಿ ಕೆಲವು ಆಡಳಿತ ಮಂಡಳಿಯವರು ಆರ್ಹತೆಯನ್ನು ಸಂಪೂರ್ಣವಾಗಿ ಕೊಂದಿದ್ದಾರೆ. ಮತ್ತೊಂದು ಬಹಳ ಅಪಾಯಕರವಾದ ಬೆಳವಣಿಗೆ ಏನೆಂದರೆ, ಮೊದಲನೇ ವರ್ಷಕ್ಕೆ ಸೇರುವಾಗಲೇ ಮುಂದಿನ

ವರ್ಷ ಕಂಪ್ಯೂಟರ್ ಕೊಡಿಸುತ್ತೇವೆಂದು ಅವರ ಹತ್ತಿರ ದುಡ್ಡು ತೆಗೆದುಕೊಳ್ಳುತ್ತಾರೆ. ಇವರಿಗೆ ಲಂಗುಲಗಾಮು ಇಲ್ಲದೇ ಇರುವುದರಿಂದ ಆಡಳಿತ ಮಂಡಳಿಯವರು ದುಡ್ಡು ತೆಗೆದುಕೊಂಡು ಹೆಚ್ಚುವರಿ ಸೀಟುಗಳನ್ನು ತುಂಬುತ್ತಿದ್ದಾರೆ. ಅಲ್ಲಿ ವೇಕೆನ್ಸಿ ಸೃಷ್ಟಿ ಮಾಡುವುದಕ್ಕೋಸ್ಕರ ಬೇಕಾಗಿ ಬಡ ವಿದ್ಯಾರ್ಥಿಯಿರಬಹುದು, ಎಸ್‌ಸಿ/ಎಸ್‌ಟಿ ವಿದ್ಯಾರ್ಥಿ ಇರಬಹುದು, ಇವರನ್ನು ಫೇಲ್ ಮಾಡಿ, ಸೆಕೆಂಡ್‌ಈಯರ್ ಥರ್ಡ್ ಸೆಮಿಸ್ಟಾರ್‌ಗೆ ಬೇರೆ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ. ಹೀಗಾಗಿ ನನ್ನ ಅನಿಸಿಕೆ ಪ್ರಕಾರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸುಮಾರು ಮೂರು ಸಾವಿರ ಸೀಟುಗಳು ಜಾಸ್ತಿಯಾಗುತ್ತಿವೆ. ಬಹುಶಃ ಇದರಲ್ಲಿ ನಮಗೆ ಗೊತ್ತಿಲ್ಲದ ರೀತಿಯಲ್ಲಿ ಎಐಸಿಟಿಇನವರು ಗುಟ್ಟಾಗಿ ಶಾಮೀಲಾಗಿದ್ದಾರೆ. ಆಡಳಿತ ಮಂಡಳಿಯವರೂ ಕೂಡ ರಾಜ್ಯ ಸರ್ಕಾರಕ್ಕೆ ಕಣ್ಣಿಗೆ ಮಣ್ಣು ಎರಚಿದ್ದಾರೆ. ಈ ವಿಷಯ ಆಸಕ್ತಿಯಿರುವ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ? ಅನಾವಶ್ಯಕವಾಗಿ ಸಾರ್ವಜನಿಕರು ನಿಮ್ಮ ಮೇಲೆ ಏಕೆ ಅನುಮಾನಪಡುವ ಹಾಗೆ ಬಿಟ್ಟಿದ್ದೀರಿ? ಇದನ್ನು ಎಐಸಿಟಿಇನವರು ಕಂಟ್ರೋಲ್ ಮಾಡುತ್ತಿಲ್ಲ, ರಾಜ್ಯ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಧಿಕ್ಕರಿಸಿ, ಬ್ರಾಂಚ್ ಬದಲಾವಣೆಗಳನ್ನು ಮಾಡಿ ಒಂದು ವರ್ಷಕ್ಕೆ ಸುಮಾರು 50 ರಿಂದ 60 ಕೋಟಿ ರೂಪಾಯಿಗಳ ಅವ್ಯವಹಾರ ಆಗಿರತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಒಟ್ಟಾರೆಯಾಗಿ ಎಐಸಿಟಿಇನವರು ಹೊರಡಿಸಿರುವ ಆದೇಶವನ್ನು ಗಾಳಿಗೆ ತೂರಿದ್ದಾರೆ, ಅವರೂ ಕೂಡ ಇದರಲ್ಲಿ ಶಾಮೀಲಾಗಿದ್ದರೆನ್ನುವ ಅನುಮಾನ ನನಗಿದೆ. ಆದ್ದರಿಂದ, 1996ರಿಂದ ಈ ನಾಲ್ಕು ವರ್ಷಗಳಲ್ಲಿ ಎಲ್ಲಾ ಆಡಳಿತ ಮಂಡಳಿಯವರು ಎಷ್ಟು ಬ್ರಾಂಚ್ ಬದಲಾವಣೆಗಳನ್ನು ಮಾಡಿದ್ದಾರೆನ್ನುವ ಬಗ್ಗೆ ಸಿಬಿಐ ತನಿಖೆಗೆ ಒಳಪಡಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ಒಂದು ಸಂಸ್ಥೆ ಎಐಸಿಟಿಇ ಇರುವುದರಿಂದ ಇದರ ಬಗ್ಗೆ ಕೇವಲ ಸಿಓಡಿ ತನಿಖೆ ಆಗದೇ ಸಿಬಿಐನಿಂದ ತನಿಖೆಯಾಗಬೇಕಾಗಿದೆ. ಆದ್ದರಿಂದ, ಇದನ್ನು ಸಿಬಿಐಗೆ ರೆಫರ್ ಮಾಡಬೇಕು, ಎಷ್ಟು ಬಡ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ, ಎಷ್ಟೆಷ್ಟು ಕೋಟಿ ರೂಪಾಯಿ ಅನ್ಯಾಯವಾಗಿದೆ, ಇದೆಲ್ಲಾ ಹೊರಗಡೆ ಬರಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಈ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಯವೆಂದು ನಾವು ಹೊಸದಾಗಿ ಪ್ರಾರಂಭಿಸಿದೆವು. ಎಂಬಿಎ ಮತ್ತು ಎಂಸಿಎ ಈ ಕೋರ್ಸ್‌ಗಳ ಪ್ರವೇಶದಲ್ಲೂ ಕೂಡ ಅವ್ಯವಹಾರ ನಡೆದಿದೆ. ರಾಜ್ಯ ಸರ್ಕಾರದವರು ದಿ: 18-7-2000 ದಂದು ಒಂದು ಆದೇಶವನ್ನು ಹೊರಡಿಸಿದೆ. ಎಂಸಿಎ ಮತ್ತು ಎಂಬಿಎ ಈ ತರಹ ಕೋರ್ಸ್‌ಗಳು ಬಹಳ ಪ್ರತಿಷ್ಠಿತವಾದ ಕೋರ್ಸ್‌ಗಳಾಗಿವೆ. ಏಕೆಂದರೆ, ಎಂಸಿಎ ಓದಿದವರು ಕಂಪ್ಯೂಟರ್ ಇಂಜಿನಿಯರಿಂಗ್ ಓದಿದ ವಿದ್ಯಾರ್ಥಿಗಳಿಗೆ ಸಿಗುವಂಥ ಹುದ್ದೆಗಳು ಲಭ್ಯವಾಗುವುದರಿಂದ ಅದು ಇದಕ್ಕೆ ಸರಿಸಾಮಾನವಾದ ಕೋರ್ಸ್ ಆಗಿರುವುದರಿಂದ ಇಲ್ಲಿ ಡೋನೇಷನ್ ಹಾವಳಿ ಜಾಸ್ತಿಯಿದೆ. ಆದರೆ, ಎಂಸಿಎ ಸೀಟು ಆಡ್ಮಿಷನ್ ಮಾಡಿಸಿಕೊಳ್ಳಬೇಕೆಂದು ನೀವು ಒಂದು ನಿರ್ದೇಶನವನ್ನು ಕೊಟ್ಟಿದ್ದೀರಿ. ಅದೇನೆಂದರೆ, ಎಂಸಿಎಗೆ ಗೌರ್ನಮೆಂಟ್ ಸೀಟುಗಳಿಗೆ 30,000 ರೂಪಾಯಿ, ಆಡಳಿತ ಮಂಡಳಿಯ ಸೀಟುಗಳಿಗೆ 70,000 ರೂಪಾಯಿ. ಎಂಬಿಬಿ ಕೋರ್ಸ್‌ಗಳಿಗೆ ಗೌರ್ನಮೆಂಟ್ ಸೀಟುಗಳಿಗೆ

20,000 ರೂಪಾಯಿ, ಆಡಳಿತ ಮಂಡಳಿಯ ಸೀಟುಗಳಿಗೆ 60,000 ರೂಪಾಯಿ. ಹಿಂದೆ ಎಷ್ಟು ಇತ್ತೆಂದರೆ, ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಒಂದು ವರ್ಷಕ್ಕೆ ಸುಮಾರು 32 ಸಾವಿರ ರೂಪಾಯಿ ಫೀ ಇದ್ದರೆ ಇವತ್ತು 45 ಸಾವಿರ ರೂಪಾಯಿ ಜಾಸ್ತಿ ಮಾಡಿದ್ದಾರೆ. ಫೀ ಜಾಸ್ತಿಯಾಗುವುದಕ್ಕೆ ಏನು ಕಾರಣ ಎಂದರೆ, ಮ್ಯಾನೇಜ್‌ಮೆಂಟ್‌ನವರು ಏನು ಕೇಳಿದರು ಎಂದರೆ 1983ರಲ್ಲಿ ನಾವು ಡೋನೇಷನ್ ತೆಗೆದುಕೊಳ್ಳಬಾರದೆಂದು ಅಬಾಲಿಷ್ ಆಫ್ ಕ್ಯಾಪಿಟೇಷನ್ ಆಕ್ಟ್ ಎಂದು ಒಂದು ಕಾನೂನು ಹೊರಡಿಸಿದಿರಿ, ನಾವು ಸಂಸ್ಥೆಯನ್ನು ಅಭಿವೃದ್ಧಿ ಮಾಡಬೇಕಾದರೆ, ಕಟ್ಟಡಗಳನ್ನು ಕಟ್ಟಿಸಬೇಕಾದರೆ, ಕೆಲವು ಸಲಕರಣೆಗಳನ್ನು ಒದಗಿಸಬೇಕಾದರೆ ನಮಗೆ ದುಡ್ಡು ಬೇಕಾಗುತ್ತದೆ, ಆದ್ದರಿಂದ ಸೀಟು ಆದರೂ ಜಾಸ್ತಿ ಮಾಡಬೇಕು ಎಂದು ಕೇಳಿಕೊಂಡಿದ್ದರಿಂದ, ಆಡಳಿತ ಮಂಡಳಿಯವರು 70 ಸಾವಿರ ರೂಪಾಯಿ ಫೀ ಕಲೆಕ್ಟ್ ಮಾಡಬಹುದು ಎಂದು ಮಾಡಿದೆವು. ನಂತರದಲ್ಲಿ ಅದು ಏನಾಗಿದೆ ಎಂದರೆ, ಅವರು ಫೀ ಕಟ್ಟಿಸಿಕೊಳ್ಳುವುದರ ಜೊತೆಗೆ ಡೋನೇಷನ್ ಕೂಡ ತೆಗೆದುಕೊಳ್ಳುತ್ತಾರೆ. ಕಡಿಮೆ ಎಂದರೂ ಇವತ್ತು ಎಂಸಿಎ ಸೀಟುಗಳು ಒಂದೂವರೆ ಲಕ್ಷದಿಂದ ಎರಡು ಲಕ್ಷ ರೂಪಾಯಿವರೆಗೆ ಡೋನೇಷನ್ ಕೊಡಬೇಕಾದ ಸ್ಥಿತಿ ಇದೆ. ಇದಕ್ಕೊಂದು ನಾಮ್‌ಕೆ ವಾಸ್ತೆ ಇಲ್ಲ, ಯಾರೋ ಒಬ್ಬ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಡೆಲ್ಲಿ ಮಂತ್ರಿಗಳಾಗಲಿ, ಹೇಳಿದ ತಕ್ಷಣ ಒಂದೆರಡು ಸೀಟು ಕೊಡುವುದು, ಉಳಿದ ಎಲ್ಲಾ ಸೀಟುಗಳನ್ನು ಅವರೇ ಭರ್ತಿಮಾಡಿಕೊಳ್ಳುತ್ತಾರೆ. ಕ್ಯಾಪಿಟೇಷನ್ ಆಕ್ಟ್ ಇದ್ದರೂ ಕೂಡ ಅದನ್ನು ಗಾಳಿಗೆ ತೂರಿ ಈ ರೀತಿಯಾದ ಅಡ್ಮಿಷನ್ ಮಾಡುತ್ತಿದ್ದಾರೆ. ನನಗೆ

5.50 ಪಿ.ಎಂ.

ತಿಳಿದ ಮಟ್ಟಿಗೆ ಸುಮಾರು ೭೧೦ ಇಂಜಿನಿಯರಿಂಗ್ ಕಾಲೇಜುಗಳಿವೆ. ಇದರಲ್ಲಿ ಕೆಲವು ಕಾಲೇಜುಗಳಲ್ಲಿ ಮಾತ್ರ ಎಂ.ಸಿ.ಎ ಮತ್ತು ಎಂ.ಬಿ.ಎ. ಕೋರ್ಸ್‌ಗಳಿವೆ. ಈ ಎಲ್ಲಾ ಕಾಲೇಜುಗಳಲ್ಲಿ ಡೋನೇಷನ್ ಇಲ್ಲದೆ ಒಂದು ಸೀಟ್ ಸಹ ಕೊಡುತ್ತಿಲ್ಲ. ಇವತ್ತಿನ ದಿವಸ ಎಂಸಿಎ ಸೀಟ್‌ಗೆ ಸುಮಾರು ೧.೫ ಯಿಂದ ೨ ಲಕ್ಷ ರೂಪಾಯಿ ಮತ್ತು ಎಂಬಿಎ ಸೀಟ್‌ಗೆ ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಡೋನೇಷನ್ ಪಡೆದುಕೊಳ್ಳುತ್ತಿದ್ದಾರೆ. ಒಬ್ಬ ವಿದ್ಯಾರ್ಥಿಯಿಂದ ಮ್ಯಾನೇಜ್‌ಮೆಂಟ್‌ನವರು ಒಂದು ಸಾರಿ ೧೮ ಸಾವಿರ ಮತ್ತೊಂದು ಸಾರಿ ೧೭ ಸಾವಿರ ಹಾಗೂ ೧೫ ಸಾವಿರ ರೂಪಾಯಿಯ ಮೂರು ಚೆಕ್‌ಗಳಿಂದ ಒಟ್ಟು ೫೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ರಸೀದಿ ಕೊಟ್ಟರತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಇವತ್ತಿನ ದಿವಸ ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ಸರ್ಕಾರ ಮತ್ತು ಇಲಾಖೆಗೆ ಹಾಗೂ ಕೋರ್ಟ್‌ಗೆ ಎಂದರೆ ಭಯ ಬೀಳುತ್ತಾರೆ. ಏಕೆಂದರೆ, ಇಂಟರ್‌ನಲ್ ಅಸೆಸ್‌ಮೆಂಟ್‌ನಲ್ಲಿ ನಮ್ಮನ್ನು ಫೇಲ್ ಮಾಡುತ್ತಾರೆ ಎನ್ನತಕ್ಕಂಥ ಭಯದಿಂದ ಈ ವಿಷಯವನ್ನು ಯಾವ ವಿದ್ಯಾರ್ಥಿಯೂ ಕೂಡ ಹೇಳುವುದಿಲ್ಲ. ಈ ವಿಷಯವನ್ನು ಯಾರೂ ನನ್ನ ಗಮನಕ್ಕೆ ತಂದಿಲ್ಲ ಮತ್ತು ಇದರ ಬಗ್ಗೆ ಯಾರೂ ದೂರ್ ಕೊಟ್ಟಿಲ್ಲವೆಂದು ಸರ್ಕಾರದವರು ಉತ್ತರ ಕೊಡಬಹುದು.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಅಫೆಂಟಿಕೇಟೆಡ್ ಡಾಕ್ಯುಮೆಂಟ್ಸ್‌ನ್ನು ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಆಡಳಿತ ವರ್ಗದವರು ಡೊನೇಷನ್ ತೆಗೆದುಕೊಂಡು ಯಾವ ರೀತಿಯಾದ ರಸೀದಿಯನ್ನು ಕೊಟ್ಟಿದ್ದಾರೆಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ದಯಮಾಡಿ ಅದನ್ನು ನನಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಅವರು ಡೊನೇಷನ್ ತೆಗೆದುಕೊಂಡಿದ್ದರೆ, ಅದು ಕಾನೂನು ಬಾಹಿರವಾಗಿರುವುದರಿಂದ ಅವರ ಮೇಲೆ ಸೂಕ್ತ ಕ್ರಮವನ್ನು ತಕ್ಷಣ ಜರುಗಿಸುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಡೊನೇಷನ್ ಎಂದು ರಸೀದಿಯಲ್ಲಿ ಬರೆಯುವುದಿಲ್ಲ. ಕೇವಲ ೧೮ ಸಾವಿರ ರೂಪಾಯಿಗಳ ಒಂದು ಚೆಕ್‌ನ್ನು ತೆಗೆದುಕೊಳ್ಳಲಾಗಿದೆ ಎಂದು ಬರೆದಿದ್ದಾರೆ. ರಸೀದಿಯಲ್ಲಿ ಬಿಲ್ಡಿಂಗ್ ಫಂಡ್ ಎಂದೂ ಕೂಡ ಬರೆಯುವುದಿಲ್ಲ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವ ಹಾಗೆ ಈ ಹಾವಳಿ ಬೆಂಗಳೂರಿನಲ್ಲಿ ಒಂದೇ ಕಡೆ ಅಲ್ಲ ಧಾರವಾಡ-ಹುಬ್ಬಳಿ ಮತ್ತು ಗ್ರಾಮ ಮಟ್ಟದಲ್ಲಿಯೂ ಕೂಡ ಹಬ್ಬಿದೆ. ಇದರಿಂದ ಇವತ್ತಿನ ದಿವಸ ಬಡ ಮಕ್ಕಳಿಗೆ ಕಾಲೇಜಿನಲ್ಲಿ ಸೀಟು ಸಿಗುತ್ತಿಲ್ಲ. ಹಾಗೆಯೇ ಈ ಹಾವಳಿ ಪ್ರೈಮರಿ ಮತ್ತು ಕಾಲೇಜು ಲೆವೆಲ್‌ನಲ್ಲಿಯೂ ಕೂಡ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಬಹಳ ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ಇವತ್ತಿನ ದಿವಸ ಮ್ಯಾನೇಜ್‌ಮೆಂಟ್‌ನವರು ಅಡ್ಮಿಷನ್ ಮಾಡುವುದನ್ನು ನಿಯಂತ್ರಣ ಮಾಡುವುದಕ್ಕೋಸ್ಕರ ಒಂದು ಸ್ಕ್ವಾಡ್ ಸರ್ಕಾರದ ಮಟ್ಟದಲ್ಲಿ ಇರಬೇಕಾಗುತ್ತದೆ. ಇನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದವರು ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದರಲ್ಲಿ ಏನಿದೆ ಎಂದರೆ

"There shall be an Entrance Examination for admission to M.C.A Course. The Candidate seeking admission to any of the Engineering Colleges affiliated to Vishveshwaraya Technological University, shall have to take this examination. There shall be an Admission Committee for MCA Course in each College, consisting of the Principal of the College as the Chairman HOD and one senior staff member of the concerned Department as Members and one nominee from V.T.U. as its member"

ಇದರ ಪ್ರಕಾರ ವಿ.ಟಿ.ಯು. ಮೆಂಬರ್ ಇರಬೇಕೆಂದು ಇದೆ. ಆದರೆ, ಇದುವರೆಗೂ ಯಾವುದೇ ಕಾಲೇಜಿನವರು ಯೂನಿವರ್ಸಿಟಿಗೆ ಮೆಂಬರ್ಸ್ ಕಳುಹಿಸಬೇಕೆಂದು ಕೇಳಿಲ್ಲ. ಸದರಿ ಆದೇಶವನ್ನು ಹೊರಡಿಸಿ ಸುಮಾರು ಮೂರು ವರ್ಷಗಳಾಗಿದ್ದರೂ ಸಹ ಇದುವರೆಗೆ ಒಂದು ಕಾಲೇಜಿನವರು ನಮ್ಮ ಪ್ರತಿನಿಧಿಯನ್ನು ಕಳುಹಿಸಿ ಕೊಡಬೇಕೆಂದು ಪತ್ರ ಬರೆದಿಲ್ಲ. ಇಲ್ಲಿ ನೆಪ ಮಾತ್ರಕ್ಕೆ ಅಡ್ಮಿಷನ್ ಮಾಡುವಂಥ ಸಂದರ್ಭದಲ್ಲಿ ರಿಟರ್ನ್ ಪರೀಕ್ಷೆಯನ್ನು ಮಾಡುತ್ತಾರೆ. ಆದರೆ ಡೊನೇಷನ್‌ನ್ನು ಯಾರು ಜಾಸ್ತಿ ಕೊಡುತ್ತಾರೆಯೋ ಅಂಥವರನ್ನು ಅಡ್ಮಿಷನ್ ಮಾಡಿಕೊಳ್ಳುತ್ತಿದ್ದಾರೆ. ಎ.ಐ.ಸಿ.ಟಿ.ಇ.ರವರು ಏನು ಹೇಳಿದ್ದಾರೆಂದರೆ,

> "The Institutions shall observe all instructions and guidelines issued by A.I.C.T.E regarding mode of selection of candidates for admission; prescribing fees; no capitation shall be charged and no charges other than the fee fixed by the competent authority, shall be levied on the students."

ಎ.ಐ.ಸಿ.ಟಿ.ಇ.ರವರು ಡೊನೇಷನ್ ಕಲೆಕ್ಟ್ ಮಾಡಬಾರದೆಂದು ನಿಬಂಧನೆ ಹಾಕಿದ್ದಾರೆ. ಆದ್ದರಿಂದ ಶುಲ್ಕವನ್ನು ಜಾಸ್ತಿ ಮಾಡಿದರೆ ಮಾತ್ರ ನಾವು ಕಾಲೇಜು ನಡೆಸುವುದಕ್ಕೆ ಸಾಧ್ಯವಾಗುತ್ತದೆಂದು ಆಡಳಿತ ವರ್ಗದವರು ಕೇಳಿಕೊಂಡಿರುವುದರಿಂದ ಶುಲ್ಕವನ್ನು ಜಾಸ್ತಿ ಮಾಡಲಾಗಿದೆ. ಈಗ ಶುಲ್ಕವನ್ನು ೭೦ ಸಾವಿರ ರೂ. ಮಾಡಿಸಿಕೊಂಡಿದ್ದಾರೆ. ಇದಕ್ಕೆ ತಕ್ಕಂತೆ ಡೊನೇಷನ್ ಕೂಡ ಜಾಸ್ತಿಯಾಗಿದೆಯೇ ಹೊರತು ಕಡಿಮೆ ಏನೂ ಆಗಿಲ್ಲ. ಇವತ್ತಿನ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಗಾಯದ ಮೇಲೆ ಇನ್ನೊಂದು ಬರೆ ಹಾಕಿದಂತೆ ಆಗಿದೆ. ಇವತ್ತಿನ ದಿವಸ ಬಡ ವಿದ್ಯಾರ್ಥಿಗಳು ಇಂಥ ಕೋರ್ಸ್‌ಗಳನ್ನು ಮಾಡುವುದಕ್ಕೆ ಆಗುತ್ತಿಲ್ಲ. ಇದರಿಂದ ಏನು ತಿಳಿಯುತ್ತದೆ ಎಂದರೆ, ಈ ಸರ್ಕಾರ ಮ್ಯಾನೇಜ್‌ಮೆಂಟ್ ಪರವಾಗಿ ಇದೆ ಎನ್ನತಕ್ಕಂಥದು ಅನಿವಾರ್ಯವಾಗಿದೆ ಎಂದು ಸಾರ್ವಜನಿಕರಲ್ಲಿ ಬಂದಿದೆ. ನನ್ನ ಭಾವನೆಯೂ ಕೂಡ ಇದೇ ಆಗಿದೆ. ಏಕೆಂದರೆ, ಇಂಜಿನಿಯರಿಂಗ್ ಸೀಟ್‌ನಲ್ಲಿ ಮ್ಯಾನೇಜ್‌ಮೆಂಟ್ ಕೋಟಾ ೫೦ ಇರುವುದನ್ನು ೧೫೦ ಮಾಡಿದ್ದೀರಿ. ೩೨ ಸಾವಿರ ರೂಪಾಯಿ ಇದ್ದಂಥ ಶುಲ್ಕವನ್ನು ೪೫ ಸಾವಿರ ಮತ್ತು ಎಂ.ಸಿ.ಎ. ಕೋರ್ಸ್‌ಗೆ ೭೦ ಸಾವಿರ ಮತ್ತು ಎಂ.ಬಿ.ಎ. ಕೋರ್ಸ್‌ಗೂ ಸಹ ಶುಲ್ಕವನ್ನು ಜಾಸ್ತಿ ಮಾಡಿದ್ದಾರೆ. ಇದರ ಜೊತೆಗೆ ಬಡವರ ಹತ್ತಿರ ಡೊನೇಷನ್ ಪಡೆದುಕೊಳ್ಳುತ್ತಿದ್ದಾರೆ. ೧೦೦ಕ್ಕೆ ೧೦೦ರಷ್ಟು ಸೆಂಟ್ರಲೈಜ್ಡ್ ಕೌನ್ಸಿಲಿಂಗ್ ಮಾಡಿ ಅಡ್ಮಿಷನ್ ಕೆಲಸವನ್ನು ಸರ್ಕಾರವೇ ಮಾಡಬೇಕೆಂದು ಎ.ಐ.ಟಿ.ಸಿ.ಇ.ರವರು ಒಂದು ಡೈರೆಕ್ಷನ್ ಕೊಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಸಿ.ಇ.ಟಿ.ಮಾದರಿಯಲ್ಲಿಯೇ

ಎಂಸಿಎ ಮತ್ತು ಎಂಬಿಎ ಕೋರ್ಸ್‌ಗೆ ಅಡ್ಮಿಷನ್‌ನ್ನು ಪ್ರಕಟಣೆ ಮಾಡಿದ ಮೇಲೆ ನೀವು ಎಷ್ಟು ಶುಲ್ಕವನ್ನು ನಿಗದಿ ಮಾಡುತ್ತೀರಿ ಅಷ್ಟು ಶುಲ್ಕವನ್ನು ಮ್ಯಾನೇಜ್‌ಮೆಂಟ್‌ನವರು ತೆಗೆದುಕೊಳ್ಳುವಂಥ ವ್ಯವಸ್ಥೆ ಆಗಬೇಕು. ಯಾವುದೇ ಕಾರಣಕ್ಕೂ ಮ್ಯಾನೇಜ್‌ಮೆಂಟ್‌ನವರು ಹೆಚ್ಚಿನ ಶುಲ್ಕವನ್ನು ಕಲೆಕ್ಟ್ ಮಾಡುವುದಕ್ಕೆ ಅವಕಾಶ ಕೊಡಬಾರದು. ಕೌನ್ಸಿಲಿಂಗ್ ಸಂದರ್ಭದಲ್ಲಿ ಶುಲ್ಕವನ್ನು ಕಲೆಕ್ಟ್ ಮಾಡಿ ಆಡಳಿತ ವರ್ಗದವರ ಅಕೌಂಟ್‌ಗೆ ಡೆಬಿಟ್ ಮಾಡತಕ್ಕಂಥ ಕೆಲಸವನ್ನೂ ಸಹ ಮಾಡಬಹುದು. ಈ ರೀತಿಯಾದಂಥ ವ್ಯವಸ್ಥೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಆಗತಕ್ಕಂಥ ಶೋಷಣೆಯನ್ನು ಸ್ವಲ್ಪಮಟ್ಟಿಗಾದರೂ ತಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸುಮಾರು ೧೦ ರಿಂದ ೧೫ ವರ್ಷಗಳ ವರೆಗೆ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಅರೆಕಾಲಿಕ ಉಪನ್ಯಾಸಕರು ಕೆಲಸ ಮಾಡತಕ್ಕಂಥದನ್ನು ನಮ್ಮ ಸರ್ಕಾರ ಮನಗೊಂಡು, ಇವರನ್ನು ಯಾವರೀತಿಯಾಗಿ ಅಬ್ಸಾರ್ಬ್ ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಿ ದಿನಾಂಕ: ೨೨-೦೭-೧೯೯೭ರಲ್ಲಿ ಇವರನ್ನು ಅಬ್ಸಾರ್ಬ್ ಮಾಡುವ ಬಗ್ಗೆ ಒಂದು ನಿಯಮಾವಳಿಯನ್ನು ತಯಾರು ಮಾಡಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಮೊದಲು ಯಾವುದೇ ನಿಯಮಾವಳಿ ಇರಲಿಲ್ಲ. ಇದರ ಬಗ್ಗೆ ಕೆಲವು ವಿದ್ಯಾರ್ಥಿಗಳು ಕೆ.ಎ.ಟಿ. ಮತ್ತು ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರು. ಈ ಒಂದು ನಿಯಮಾವಳಿಯನ್ನು ಎರಡು ಕಡೆ ರದ್ದು ಮಾಡಲಾಯಿತು. ಆದರೆ ನಮ್ಮ ಸರ್ಕಾರ ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಯಿತು. ನಾವು ಮಾಡಿರತಕ್ಕಂಥ ನಿಯಮಾವಳಿ ಸರಿಯಾಗಿದೆ, ಇದರ ಪ್ರಕಾರ ಅರೆಕಾಲಿಕ ಉಪನ್ಯಾಸಕರನ್ನು ಅಬ್ಸಾರ್ಬ್ ಮಾಡಬಹುದೆಂದು ಹೇಳಿ ಸುಪ್ರೀಂ ಕೋರ್ಟ್ ಸದರಿ ನಿಯಮಾವಳಿಯನ್ನು ಎತ್ತಿ ಹಿಡಿಯಿತು. ಈ ಒಂದು ಆದೇಶ ಬಂದು ಸುಮಾರು ಏಳೆಂಟು ತಿಂಗಳು ಆದರೂ ಸಹ ಈ ಪ್ರಕ್ರಿಯೆ ಇನ್ನು ಪ್ರಾರಂಭವಾಗಿಲ್ಲ. ನಿಮ್ಮ ಸರ್ಕಾರ ಇದ್ದಾಗ ಮಾಡಿರತಕ್ಕಂಥ ನಿಯಮಾವಳಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಆದ್ದರಿಂದ ಇದನ್ನು ಆದಷ್ಟು ಬೇಗ ಜಾರಿಗೊಳಿಸಬೇಕೆಂದು ನಮ್ಮ ಪಕ್ಷದ ಸಭೆ ನಡೆಯುವಂಥ ಸಂದರ್ಭದಲ್ಲಿ ಡೆಲಿಗೇಶನ್ ಬಂದಿದ್ದರು. ಸದರಿ ನಿಯಮಾವಳಿ ಈಗ ಎಲ್ಲಿ ಇದೆಯೋ ಎಂಬುದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಇದನ್ನು ಆದಷ್ಟು ಬೇಗ ಜಾರಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಜಿ. ಪರಮೇಶ್ವರ್ :— ಮಾನ್ಯ ಉಪಾಧ್ಯಕ್ಷರೆ, ಸದರಿ ಪ್ರಕ್ರಿಯೆ ಪ್ರಾರಂಭವಾಗಿಲ್ಲ ಎನ್ನತಕ್ಕಂಥದ್ದು ಸತ್ಯಕ್ಕೆ ದೂರವಾದುದು. ಈ ಪ್ರಕ್ರಿಯೆ ಪ್ರಾರಂಭವಾಗಿದ್ದು, ಈ ಬೌಕಟ್ಟಿನೊಳಗೆ ಎಷ್ಟು ಜನ ಬರುತ್ತಾರೆ ಎನ್ನತಕ್ಕಂಥದನ್ನು ಪಟ್ಟಿ ಮಾಡಿ ಹಣಕಾಸಿನ ಇಲಾಖೆಯ ಅನುಮತಿಗಾಗಿ ಈಗಾಗಲೇ ಕಳುಹಿಸಿಕೊಡಲಾಗಿದೆ. ಹಣಕಾಸಿನ ಇಲಾಖೆಯಿಂದ ಅನುಮತಿ ಬಂದ ಕೂಡಲೇ ಆದೇಶಕೊಡತಕ್ಕಂಥ ಕೆಲಸವನ್ನು ಮಾಡಲಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ಇದನ್ನು ಆದಷ್ಟು ಜಾಗ್ರತೆ ಮಾಡಿದರೆ ಒಳ್ಳೆಯದು. ಏಳು ತಿಂಗಳ ಹಿಂದೆ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದರೂ ಕೂಡ ಇದನ್ನು ಜಾರಿಗೆ ತರುವುದರಲ್ಲಿ ಸ್ವಲ್ಪ ತಡವಾಗಿದೆ ಎಂಬುದು ನನ್ನ ಭಾವನೆಯಾಗಿದೆ.

ಇದನ್ನು ತಾವು ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ಅರೆಕಾಲಿಕ ಉಪನ್ಯಾಸಕರು ಬಹಳ ವರ್ಷಗಳಿಂದ ಕಾಯುತ್ತಿರುವುದರಿಂದ, ಇದನ್ನು ಸ್ವಲ್ಪ ಬೇಗ ಮಾಡಬೇಕೆಂದು ನನ್ನ ಅನಿಸಿಕೆಯಾಗಿದೆ. ಸ್ನಾಫ್‌ಗ್ಯಾಪ್ ಲೆಕ್ಚರರ್ಸ್ ನೇಮಕಾತಿಯಲ್ಲಿ ಹಿಂದೆ ಇದ್ದಂಥ ಆಯುಕ್ತರು ಮೀಸಲಾತಿ ನಿಯಮಾವಳಿಯನ್ನು ಗಾಳಿಗೆ ತೂರಿದ್ದಾರೆ ಎನ್ನತಕ್ಕಂಥದ್ದು ನಿಮ್ಮ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ. ಇವತ್ತಿನ ದಿವಸ ಸುಮಾರು ೪೫೫ ಸ್ನಾಫ್ ಗ್ಯಾಪ್ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಬಾರದೆ ಈಗಾಗಲೇ ೩೫೮ ಸದರಿ ಲೆಕ್ಚರರ್ಸ್‌ನ್ನು ರೆಗ್ಯುಲರೈಜ್ ಮಾಡಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಮೀಸಲಾತಿಯನ್ನು ಅನುಸರಿಸಿಲ್ಲ. ಈ ಕಾನೂನನ್ನು ಉಲ್ಲಂಘನೆ ಮಾಡಿರತಕ್ಕಂಥವರನ್ನು ಇವತ್ತಿನದಿವಸ ಕೆ.ಎ.ಟಿ.ಗೆ. ಸದಸ್ಯರನ್ನಾಗಿ ಮಾಡಿದ್ದಾರೆ. ಇದು ಯಾವ ಸರ್ಕಾರದ ನೀತಿ? ಕಾನೂನು ಬದ್ಧವಾಗಿ ಮತ್ತು ನಿಷ್ಪಕ್ಷಪಾತವಾಗಿ ಕಾನೂನು ಅಡಿಯಲ್ಲಿ ಯಾರು ಕೆಲಸ ಮಾಡಿರುತ್ತಾರೆಯೋ ಅಂಥ ಅಧಿಕಾರಿಗಳನ್ನು ಗುರುತಿಸಿ ಕೆಎಟಿಗೆ ರೆಕ್‌ಮೆಂಡ್ ಮಾಡಬೇಕು. ಇಲ್ಲಿ ಎಲ್ಲಾ ಕಾನೂನುಗಳನ್ನು ಉಲ್ಲಂಘನೆ ಮಾಡಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಮೀಸಲಾತಿಯನ್ನು ಗಾಳಿಗೆ ತೂರಿ ಪರಿಶಿಷ್ಟ ಜಾತಿವರ್ಗದ ಅಭ್ಯರ್ಥಿಗಳಿಗೆ ಅನ್ಯಾಯವನ್ನು ಮಾಡಿ ಇದನ್ನು ಸರ್ಕಾರದ ಗಮನಕ್ಕೆ ತರದೆ ಸ್ನಾಫ್‌ಗ್ಯಾಪ್ ರೆಕ್ರೂಟ್‌ಮೆಂಟ್‌ನ್ನು ಅಲ್ಲಿಯೇ ಮಾಡಿ ಹೋಗಿರುವಂತಹವರನ್ನು ಕೆ.ಎ.ಟಿ. ಸದಸ್ಯರನ್ನಾಗಿ ಮಾಡಿದ್ದಾರೆ. ಇದರ ಬಗ್ಗೆ ನಾನು ಬಹಳ ಆಕ್ಷೇಪವನ್ನು ಎತ್ತಬೇಕಾಗುತ್ತದೆ. ಇದರ ಬಗ್ಗೆ ತಾವು ಪ್ರತಿಭಟನೆಯನ್ನು ಮಾಡಬೇಕಾಗಿತ್ತು. ಇವತ್ತು ಅದರ ಬಗ್ಗೆ ಎನ್‌ಕ್ವಯರಿ ಆಗಬೇಕು, ಹೈಯರ್ ಎಜ್ಯುಕೇಷನ್‌ನಲ್ಲಿ ಸುಮಾರು ಹಣವನ್ನು ಕಡತ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ನಾನು ಅದರ ಬಗ್ಗೆ ಆಕ್ಷೇಪವನ್ನು ಮಾಡುವುದಿಲ್ಲ. ಗ್ರಾಂಟ್-ಇನ್-ಏಡ್ ಇರುವುದರಿಂದ ಸಬ್ಸಿಡಿ ಜಾಸ್ತಿಯಾಗುತ್ತದೆ, ಅದರಲ್ಲಿ ಕೆಲವು ಸಂಸ್ಥೆಗಳು ಸುಮಾರು 20 ರಿಂದ 25 ವರ್ಷಗಳಿಂದ ಗ್ರಾಂಟ್‌ನ್ನು ತೆಗೆದುಕೊಂಡು ಬರುತ್ತಿದ್ದಾರೆ. ಅವು ಪ್ರಬಲವಾಗಿ ಬೆಳೆದಿವೆ, ಎಲ್ಲಾ ಸೌಲಭ್ಯಗಳು ಅಲ್ಲಿ ಇದೆ. ಹೊಸದಾಗಿ ಪ್ರಾರಂಭವಾಗಿರತಕ್ಕಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೇಜುಗಳಿಗೆ ಇವತ್ತು ಗ್ರಾಂಟ್‌ನ್ನು ಕೊಡುವುದಕ್ಕಾಗಿಲ್ಲ. ಇದು ನಮ್ಮ ಕಾಲದಲ್ಲೂ ಆಗಲಿಲ್ಲ ಅದಕ್ಕಾಗಿ ನಾನು ಪಶ್ಚಾತ್ತಾಪವನ್ನು ಪಡುತ್ತೇನೆ. ಅದಕ್ಕಾಗಿ ನಾನು ಇವತ್ತು ಮಂತ್ರಿಗಳಲ್ಲಿ ಹೇಳುತ್ತಿದ್ದೇನೆ, ಕೊನೆಯ ಪಕ್ಷ ಉನ್ನತ ಶಿಕ್ಷಣ ಖಾತೆಯಲ್ಲಿ ಎಷ್ಟು ಕಾಲೇಜುಗಳಿವೆ, ಎಷ್ಟು ಎಸ್‌ಸಿ/ಎಸ್‌ಟಿ ಮ್ಯಾನೇಜ್‌ಮೆಂಟ್‌ಗಳು ಕೆಲಸವನ್ನು ಮಾಡುತ್ತಿವೆ, ಅವರಿಗೆ ಗ್ರಾಂಟ್‌ನ್ನು ಕೊಡುವ ಬಗ್ಗೆ ಮಾಡಬೇಕು. ಅದಕ್ಕೆ ನಾವು ಕ್ಯಾಬಿನೆಟ್ ಸಬ್-ಕಮಿಟಿಯನ್ನು ಮಾಡಿ ಕೆಲವು ವಿಧಾನಗಳನ್ನು ಕಂಡುಹಿಡಿದಿದ್ದೇವೆ. ಯಾರ್‍ಯಾರು ಬಹಳ ವರ್ಷಗಳಿಂದ ಇದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ಅಂತಹವರಿಗೆ ಗ್ರಾಂಟ್‌ನ್ನು ಕಡತ ಮಾಡಿ, ಮೊನ್ನೆ ಹೊಸದಾಗಿ ಹಿಂದುಳಿದವರು ಪ್ರಾರಂಭಮಾಡಿರತಕ್ಕಂತಹ

ಸಂಸ್ಥೆಗಳಿಗೆ ಗ್ರಾಂಟ್ ಕೊಡಬೇಕೆಂದು ತಾವು ಮಾಡಿದ್ದೀರಿ, ಅದನ್ನು ತಾವು ಪರಿಶೀಲನೆಯನ್ನು ಮಾಡಬಹುದು. ಸುಮಾರು 292 ಡಿಗ್ರಿ ಕಾಲೇಜುಗಳು, 22ಬಿಎಡ್ ಕಾಲೇಜುಗಳು, 11 ಇಂಜಿನಿಯರಿಂಗ್ ಕಾಲೇಜುಗಳು, 8 ಲಾ ಕಾಲೇಜುಗಳಿಗೆ ಇವತ್ತು ನಾವು ಸರ್ಕಾರದಿಂದ ಸುಮಾರು 220 ಕೋಟಿ ರೂಪಾಯಿಗಳ ಗ್ರಾಂಟ್‌ನ್ನು ಕೊಡುತ್ತಿದ್ದೇವೆ. ಅಂದರೆ ಈ ಹೆಚ್ಚು ಹೆಚ್ಚು ಸಂಬಳವನ್ನು ಕೊಡುತ್ತಿದ್ದರೂ ಸಹ ಆದರೆ ಗುಣಮಟ್ಟ ಮಾತ್ರ ಕಡಿಮೆಯಾಗುತ್ತಲೆ ಇದೆ. ಗ್ರಾಂಟ್-ಇನ್-ಏಡ್ ಜಾಸ್ತಿಯಾದಷ್ಟು ಗುಣಮಟ್ಟವು ಎಸ್ತಿಯಾಗಬೇಕು, ಆದರೆ ಸಂಬಳ ಮಾತ್ರ ಜಾಸ್ತಿಯಾಗುತ್ತಿದೆ ಗುಣಮಟ್ಟ ಮಾತ್ರ ಕಡಿಮೆಯಾಗುತ್ತಿದೆ. It should be linked with performance. ಏಕೆಂದರೆ, they must be made accountable ಯಾರೇ ಉಪನ್ಯಾಸಕರಿರಬಹುದು, ಯಾರೇ ಇರಬಹುದು, ಗುಣಮಟ್ಟವನ್ನು ಹೆಚ್ಚಿಗೆ ಮಾಡಬೇಕಾದರೆ, ಯು.ಜಿ.ಸಿ.ಯ ಏನು ಗೈಡ್‌ಲೈನ್ಸ್ ಇದೆ, ಅದರ ಪ್ರಕಾರ ನೀವು ಬೆನಿಫಿಟ್‌ನ್ನು ಕೇಳುತ್ತೀರಿ, ಆ ಗೈಡ್‌ಲೈನ್ಸ್‌ನ್ನು ನೀವು ಏತಕ್ಕಾಗಿ ಅಳವಡಿಸಬಾರದು? ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಮಾಡಿದರೆ ಆಗ ಶಿಸ್ತನ್ನು ತರುವುದಕ್ಕೆ ಆಗುತ್ತದೆಂದು ನನ್ನ ಅನಿಸಿಕೆಯಾಗಿದೆ. ಸಿಇಟಿ ಪ್ರವೇಶದಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು ಫೀ ಕಟ್ಟಬೇಕಾದ ಅವಶ್ಯಕತೆ ಇಲ್ಲ, ನೇರವಾಗಿ ಸಿಇಟಿ ಸೆಲ್‌ನಲ್ಲಿ ಪ್ರವೇಶ ಮಾಡಿದ ನಂತರ ಮ್ಯಾನೇಜ್‌ಮೆಂಟ್‌ನವರು ತೆಗೆದುಕೊಳ್ಳಬೇಕೆಂದು ಮಾಡಿದ್ದೆವು. ಫೀ ನಾಲ್ಕೈದು ತಿಂಗಳನಂತರ ಏನು ಬರುತ್ತಿತ್ತು, ಸರ್ಕಾರ ಮೊದಲೇ ಕಟ್ಟಿದ್ದನ್ನು ಇವರು ರೀ ಇಂಬರ್ಸ್‌ಮೆಂಟ್ ಮಾಡಿಕೊಳ್ಳಬೇಕೆಂದು ಮಾಡಿದ್ದೆವು. ಆದರೆ ಈಗ ಒಂದು ರೆಪ್ರಸೆಂಟೇಷನ್ ಬಂದಿದೆ 2000-2001ನೇ ಸಾಲಿಗೆ ಈ ಸೌಲಭ್ಯವನ್ನು ಸಮಾಜಕಲ್ಯಾಣ ಇಲಾಖೆಯಿಂದ ಪೋಷಕರ ವಾರ್ಷಿಕ ಆದಾಯ 51,000 ರೂ. ಇದ್ದವರಿಗೆ ಮಾತ್ರ ಹಣ ಕಟ್ಟಬೇಕಾಗುತ್ತದೆಂದು ಹೇಳಿರುತ್ತಾರೆ. ಒಬ್ಬ ಗುಮಾಸ್ತ ನಿಗೂ ಕೂಡ 51,000 ರೂಪಾಯಿಗಳ ವಾರ್ಷಿಕ ಆದಾಯವಿರುತ್ತದೆ. ಅನಾವಶ್ಯಕವಾಗಿ ಅವರೂ ಕೂಡ ದುಡ್ಡು ಕಟ್ಟಬೇಕಾದ ಪರಿಸ್ಥಿತಿ ಬಂದಿದೆ ಎಂದು ಹೇಳಿರುತ್ತಾರೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಯಾವಾಗ ನೀವು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ಕೊಡುತ್ತೀರಿ ನಾಲ್ಕೈದು ತಿಂಗಳ ನಂತರ ಕೊಡುವ ಸ್ಕಾಲರ್‌ಶಿಪ್‌ನ್ನು ವಿದ್ಯಾರ್ಥಿಗಳಿಗೆ ಅಡ್ವಾನ್ಸ್ ಆಗಿ ಕೊಡಬೇಕೆಂದು ಹೇಳಿದ್ದೆವು. ಆ ವಿದ್ಯಾರ್ಥಿಗಳಿಗೆ ಫೀ ಇರುವುದೇ ಇಲ್ಲ, ಕೆಲವು ಮ್ಯಾನೇಜ್‌ಮೆಂಟ್‌ನವರಿಗೆ ಫೀ ಜೊತೆಗೆ ಇಷ್ಟು ಡೊನೇಷನ್ ಕೊಡಬೇಕು, ಇಲ್ಲದಿದ್ದರೆ ಸೀಟು ಇಲ್ಲವೆಂದು ಹೇಳುತ್ತಾರೆ. ಆವಾಗ ವಿದ್ಯಾರ್ಥಿಗಳು ಹಣ ಕೊಡಲೇಬೇಕು, ಇಲ್ಲದಿದ್ದರೆ ವಾಪಸ್ಸು ಹೋಗಬೇಕಾಗುತ್ತದೆ. ಆ ಪರಿಸ್ಥಿತಿಯನ್ನು ತಪ್ಪಿಸಬೇಕಾದರೆ ಆ ಹಣವನ್ನು ಸರ್ಕಾರ ಭರಿಸಬೇಕು, ಸ್ಕಾಲರ್‌ಶಿಪ್ ಬಂದ ಹಣವನ್ನು ರೀ-ಇಂಬರ್ಸ್‌ಮೆಂಟ್ ಮಾಡಿಕೊಳ್ಳಬೇಕು. ಕಂಟಿನ್‌ಜೆನ್ಸಿ ಫಂಡ್‌ದಿಂದ ಹಣವನ್ನು ಕೊಡಬೇಕೆಂದು ನಾವು ಒಂದು ಆದೇಶವನ್ನು ಹೊರಡಿಸಿದ್ದೆವು. ಅದನ್ನು ನಿಲ್ಲಿಸಿದ್ದಾರೆಂದು ತಿಳಿದುಬಂತು, ಅದು ನಿಜವೋ ಅಥವಾ ಸುಳ್ಳೋ ಎನ್ನುವುದು ನನಗೆ

ಗೊತ್ತಿಲ್ಲ. ವಿದ್ಯಾರ್ಥಿಗಳಿಗೆ ಅನಾನುಕೂಲವಾಗಬಾರದು ಅದನ್ನು ಮುಂದುವರಿಸಬೇಕು, ನಾವು ತಂದಿರುವ ಆ ಯೋಜನೆ ಬಹಳ ಉತ್ತಮವಾದುದೆಂದು ಹೇಳುತ್ತಾ ಹಲವಾರು ವಿಚಾರಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಚರ್ಚೆಯನ್ನು ನಾಳೆಗೆ ಮುಂದುವರಿಸೋಣ, ಈಗ ಅರ್ಧಗಂಟೆಯ ಕಾಲಾವಧಿ ಚರ್ಚೆ, ಶ್ರೀ ಸುಭಾಷ್ ಕಲ್ಲೂರ್ ಹಾಗೂ ಶ್ರೀ ಜಗದೀಶ್ ಶೆಟ್ಟರ್‌ರವರು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹಣವನ್ನು ಖರ್ಚು ಮಾಡುವಾಗ ಸರ್ಕಾರ ತಾರತಮ್ಯ ತೋರಿರುವ ಬಗ್ಗೆ ದಿನಾಂಕ 18ನೇ ಜುಲೈ 2001ರಂದು ಉತ್ತರಿಸುವ ಪ್ರಶ್ನೆಗಳ 14ನೇ ಪಟ್ಟಿಯಲ್ಲಿನ ಪ್ರಶ್ನ ಸಂಖ್ಯೆ : 199 2039ಕ್ಕೆ ನೀಡಿರುವ ಉತ್ತರಕ್ಕೆ ಸಂಬಂಧಪಟ್ಟಂತೆ ಅರ್ಧಗಂಟೆ ಕಾಲಾವಕಾಶದಲ್ಲಿ ಚರ್ಚೆ ಮಾಡುವುದು.

7. ಅರ್ಧಗಂಟೆ ಕಾಲಾವಧಿ ಚರ್ಚೆ

ಉತ್ತರ ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವ ಹಣದಲ್ಲಿ ತಾರತಮ್ಯ ತೋರಿಸುತ್ತಿರುವುದು.

+ ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್) :— ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ನೋಡಲಾಗಿ ಅರ್ಧ ಗಂಟೆಯ ಕಾಲಾವಕಾಶದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಕರ್ನಾಟಕದ 7 ಜಿಲ್ಲೆಗಳ ಸಾಕ್ಷರತೆಯ ಹಾಗೂ ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸಬೇಕು ಎನ್ನುವುದಕ್ಕೋಸ್ಕರ ತಾವು ಬಹಳ ಪರಿಶ್ರಮವನ್ನು ಪಟ್ಟು, ಬೀದರ್‌ದಲ್ಲಿ ಒಂದು ಸಭೆಯನ್ನು ಮಾಡಿ, ಗುಲ್ಬರ್ಗಾದಲ್ಲಿ ಎರಡು ಸಭೆಗಳನ್ನು ಮಾಡಿ, ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ತೆಗೆದು ಪ್ರಯೋಜನವಾಗತಕ್ಕಂಥ ಕೆಲಸವನ್ನು ತಾವು ಮಾಡಿರುತ್ತೀರಿ, 7 ಜಿಲ್ಲೆಗಳ ಶಾಸಕರು, ಲೋಕಸಭಾ ಸದಸ್ಯರು ಹಾಗೂ ಜನಪ್ರತಿನಿಧಿಗಳು ತಮಗೆ ಮೊದಲನೆಯದಾಗಿ ವಂದನೆಯನ್ನು ಸಲ್ಲಿಸುತ್ತೇವೆ. ತಾವು ಕೆಲವೊಂದು ವಿಚಾರಗಳನ್ನು ಮಾಡಿದ್ದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಕೆಲವೊಂದು ಮಾತುಗಳನ್ನು ತಾವು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. 7 ಜಿಲ್ಲೆಗಳ ಶೈಕ್ಷಣಿಕ ಅಭಿವೃದ್ಧಿಗೋಸ್ಕರ ತಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೀರಿ. ಕೆಲವೊಂದು ನಮಗೆ ಫಲಾಕಾರಿಯಾಗಿವೆ ಮತ್ತು ತಾರತಮ್ಯ ದೃಷ್ಟಿಯಿಂದ ಲಾಭ ಆಗತಕ್ಕಂಥದ್ದು ಕೂಡ ನಮಗೆ ಮನವರಿಕೆಯಾಗಿದೆ. ಬಜೆಟ್‌ನಲ್ಲಿ ಆ ಭಾಗದ ಜಿಲ್ಲೆಗಳಿಗೆ 50 ಪರ್ಸೆಂಟ್ ಹಣ ಕೊಡುತ್ತೇವೆಂದು ಹೇಳಿದರೆ ಅದನ್ನೂ ಕೂಡ ಸ್ವಾಗತ ಮಾಡುತ್ತೇನೆ. ಹೊಸದಾಗಿ

ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಅದರಂತೆ ಒಂದು ಲಿಸ್ಟ್ ಕೂಡ ಬಿಡುಗಡೆ ಮಾಡಿರುತ್ತೀರಿ. ಕೊಠಡಿಗಳನ್ನು ಕಟ್ಟುವುದು ಮತ್ತು ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದರ ಬಗ್ಗೆ ಕೂಡ ಹೇಳಿದ್ದೀರಿ, ಅದನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಎಷ್ಟೋ ವಿದ್ಯಾರ್ಥಿಗಳು ಶಾಲೆಗಳಿಂದ ಹೊರಗೆ ಉಳಿಯುತ್ತಿದ್ದರು. ತಾವು ಚಿನ್ನರ ಅಂಗಳ ಕಾರ್ಯಕ್ರಮವನ್ನು ಈ ದೃಷ್ಟಿಯಿಂದ ಹಮ್ಮಿಕೊಂಡಿದ್ದಕ್ಕೆ ಅದಕ್ಕು ಸ್ವಾಗತ ಮಾಡುತ್ತೇನೆ. ಕಲಿಕೆಯ ಮಟ್ಟವನ್ನು ಹೆಚ್ಚಿಸುವುದಕ್ಕೋಸ್ಕರ ನಿರಂತರ ಉಸ್ತುವಾರಿ ಮಾಡುವುದಾಗಿ ತಾವು ಹೇಳಿದಿರಿ. ನಮ್ಮ ಹಾಗೂ ನಿಮ್ಮ ದೃಷ್ಟಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸತಕ್ಕಂಥ ಪ್ರಯತ್ನವಾಗಿದೆ. ನಮಗೂ ಕೂಡ ಇದು ಸಂತೋಷವನ್ನು ತಂದಿದೆ. ತಾವು ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡು ಕ್ರಾಂತಿಕಾರಕವಾದ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಇನ್ನೊಂದು ಕಡೆ ತಾವು ಏನು ಮಾಡುತ್ತಿದ್ದಿರೆಂದರೆ, ಸಮಾನತೆಯಲ್ಲಿ ಅಸಮಾನತೆಯನ್ನು ಮಾಡುತ್ತಿದ್ದೀರೆಂದು ನಮಗೆ ಕಂಡುಬಂದಿರುತ್ತದೆ. ಮೊನ್ನೆ ತಾವು ಹೈಸ್ಕೂಲ್‌ಗಳನ್ನು ಕೊಟ್ಟಿದ್ದೀರಿ, ಅದರ ಪಟ್ಟಿ ನನ್ನ ಹತ್ತಿರ ಇದೆ. ಒಂದು ಜಿಲ್ಲೆಗೆ 14, ಒಂದು ಜಿಲ್ಲೆಗೆ 9, ಒಂದು ಜಿಲ್ಲೆಗೆ 10 ಕೊಟ್ಟಿದ್ದೀರಿ, ಆದರೆ ನಮ್ಮ ಜಿಲ್ಲೆಗೆ 3 ಹೈಸ್ಕೂಲ್‌ಗಳನ್ನು ಕೊಟ್ಟಿದ್ದೀರಿ. ನನ್ನ ತಾಲ್ಲೂಕಿಗೆ ಒಂದೂ ಕೊಟ್ಟಿಲ್ಲ, ಆದರೆ ಬೇರೆ ಒಂದು ತಾಲ್ಲೂಕಿಗೆ ಎರಡು ಕೊಟ್ಟಿದ್ದೀರಿ. ಈ ರೀತಿ ಅಸಮಾನತೆಯನ್ನು ಮಾಡಿ ತಾವು ಮೊದಲನೆಯದಾಗಿ ಹೆಜ್ಜೆಯನ್ನು ತಪ್ಪಿದ್ದೀರೆಂದು ಹೇಳಿ ಅದನ್ನು ಸರಿಪಡಿಸಬೇಕು ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನೀವು ನಮ್ಮ ಭಾಗದಲ್ಲಿ ಒಂದು ದೊಡ್ಡ ಕ್ರಾಂತಿಯನ್ನು ಮಾಡುತ್ತಿದ್ದೀರಿ. ನಮ್ಮ ಭಾಗದಲ್ಲಿ ಸಮಾನತೆಯ ದೃಷ್ಟಿಯಿಂದ ಬಹಳ ಉಪಯುಕ್ತವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತೀರಿ. ಈ ಸಂದರ್ಭದಲ್ಲಿ ಶಿಕ್ಷಣ ಆಯುಕ್ತರಾದ ಶ್ರೀ ವಿಜಯಭಾಸ್ಕರವರನ್ನು ಕೂಡ ನಾವು ನೆನಪಿಸಿಕೊಳ್ಳಬೇಕು. ಉತ್ತರ ಕರ್ನಾಟಕ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 900 ರೂಪಾಯಿಗಳು ಖರ್ಚಾದರೆ, ದಕ್ಷಿಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ವಾರ್ಷಿಕ 2700 ರೂಪಾಯಿಗಳು ಖರ್ಚಾಗುತ್ತದೆ. ಒಬ್ಬ ವಿದ್ಯಾರ್ಥಿಗೆ 1800 ರೂಪಾಯಿಗಳ ಒಂದು ವ್ಯತ್ಯಾಸವಾಗುತ್ತದೆ. ನಮ್ಮ ಭಾಗದಲ್ಲಿ ಮೂಲಭೂತವಾದ ಸೌಲಭ್ಯಗಳಿಲ್ಲ, ಸ್ಯಾನಿಟರಿ ಇಲ್ಲ, ಕಾಂಪೌಂಡ್ ವಾಲ್ ಇರುವುದಿಲ್ಲ, ಮಕ್ಕಳಿಗೆ ನೀರಿನ ವ್ಯವಸ್ಥೆ ಬರುವುದಿಲ್ಲ. ಅನೇಕ ಕಡೆ ಕಟ್ಟಡಗಳು ಇಲ್ಲ. ಆದ್ದರಿಂದ ಅಲ್ಲಿ ವಿದ್ಯಾರ್ಥಿಗೆ ಒಂದು ವಿದ್ಯಾಮಂದಿರವೆನ್ನುವ ಭಾವನೆ ಇರುವುದಿಲ್ಲ. ಆದ್ದರಿಂದ ಇಂತಹ ಒಂದು ವ್ಯತ್ಯಾಸ ಇದೆ ಎಂದು ನನಗನ್ನಿಸುತ್ತದೆ. ತಾವು ಎಲ್ಲಾ ಕಾರ್ಯಕ್ರಮಗಳನ್ನು ಸಮಾನತೆಯ ದೃಷ್ಟಿಯಿಂದ ಹಮ್ಮಿಕೊಂಡಿದ್ದಕ್ಕೆ ಸ್ವಾಗತವನ್ನು ಮಾಡಿರುತ್ತೇನೆ. ಆದರೆ ಹೈಸ್ಕೂಲ್ ಮಂಜೂರು ಮಾಡಿರುವಲ್ಲಿ ಅಸಮಾನತೆಯನ್ನು ಮಾಡಿದ್ದೀರೆಂದು ಹೇಳುತ್ತೇನೆ. ನಾನು ಅಧಿವೇಶನ ನಡೆದ ಸಮಯದಲ್ಲಿ ತಮ್ಮ ಛೇಂಬರಿಗೆ ಬಂದು ಭೇಟಿಯಾಗಿದ್ದೇನೆ. ತಾವು ಪತ್ರವನ್ನು

ಕೊಟ್ಟು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಹೇಳಿರುತ್ತೀರಿ. ಇದನ್ನು ಮಂಜೂರು ಮಾಡಬೇಕೆಂದು ಹೇಳಿದರೂ ಕೂಡ ಅದು ಲಿಸ್ಟ್‌ನಲ್ಲಿ ಈಗ ಬಂದಿರುವುದಿಲ್ಲ. ಈ ತಪ್ಪನ್ನು ತಾವು ಸರಿಪಡಿಸುತ್ತೀರೆಂದು ನನಗೆ ಬಹಳ ಆಸೆಯಿದೆ, ನಮ್ಮ ತಾಲ್ಲೂಕಿನ ಪದವಿ ಪೂರ್ವ ಕಾಲೇಜುಗಳನ್ನು ಸ್ಥಳಾಂತರ ಮಾಡಿರುತ್ತೀರಿ. ನನ್ನ ಕ್ಷೇತ್ರದ ನಿರ್ಜ ಮತ್ತು ಹುಡ್ಗಿ ಗ್ರಾಮದಲ್ಲಿರುವ ಪದವಿಪೂರ್ವ ಕಾಲೇಜುಗಳನ್ನು ಸ್ಥಳಾಂತರ ಮಾಡಿ ಈಗ ಮಂಡ್ಯ ಜಿಲ್ಲೆಗೆ ಕೊಟ್ಟಿರುತ್ತೀರಿ. ನಿರ್ಜ ಗ್ರಾಮದಲ್ಲಿ ಕಾಲೇಜು ಪ್ರಾರಂಭವಾದಾಗಿನಿಂದ ಎರಡರಿಂದ ಮೂರಕ್ಕಿಂತ ಹೆಚ್ಚು ಶಿಕ್ಷಕರು ಇರುವುದಿಲ್ಲ. ಹೀಗಾಗಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹೇಗೆ ಬಯಸುವುದು ಎನ್ನುವುದರ ಬಗ್ಗೆ ಮಂತ್ರಿಗಳು ವಿಚಾರವನ್ನು ಮಾಡಬೇಕು. ಯಾವ ಶಾಲೆಯಲ್ಲಿ 6 ರಿಂದ 7 ಶಿಕ್ಷಕರು ಮಂಜೂರಾತಿ ಇದೆ, ತಾವು ಕೊಟ್ಟಿರುವುದು 2-3. ಅಲ್ಲಿ ವಿದ್ಯಾರ್ಥಿಗಳು ಬರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ತಾವು ಮೊದಲು ನಮಗೆ ಉಪನ್ಯಾಸಕರನ್ನು ಕೊಡಿ. ಅಲ್ಲಿ ಎಕಾನಾಮಿಕ್ಸ್, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ ಹೇಳತಕ್ಕಂತಹ ಯಾವ ಶಿಕ್ಷಕರು ಇರುವುದಿಲ್ಲ. ನಾನು ಕೂಡ ಆ ಕಾಲೇಜಿಗೆ ಭೇಟಿ ಕೊಟ್ಟು ಬಂದಿರುತ್ತೇನೆ, ಅಲ್ಲಿ 4 ಹುದ್ದೆಗಳು ಖಾಲಿ ಇರುತ್ತದೆ. ಉಪಾಧ್ಯಾಯರನ್ನು ಕೊಟ್ಟು ನಮಗೆ ಒಂದು ವರ್ಷ ಸಮಯಾವಕಾಶವನ್ನು ಕೊಟ್ಟು, ಅಲ್ಲಿ ವಿದ್ಯಾರ್ಥಿಗಳ ಹಾಜರಾತಿ ಬರದಿದ್ದರೆ ಆಗ ಕಾಲೇಜನ್ನು ಸ್ಥಳಾಂತರ ಮಾಡಿದರೆ ನಮ್ಮ ಆಭ್ಯಂತರವೇನು ಇಲ್ಲ. ಕೂಡ್ಗಿ ಗ್ರಾಮದಲ್ಲಿರುವ ಶಾಲೆಯನ್ನೂ ಕೂಡ ಮಂಡ್ಯ ಜಿಲ್ಲೆಗೆ ವರ್ಗಾಯಿಸಿದ್ದೀರಿ. ಆ ಗ್ರಾಮದಿಂದ ಶಾಲಾ ಕಟ್ಟಡ ಸುಮಾರು 3. ಕಿ.ಮೀ. ಇರುವುದರಿಂದ ಅಲ್ಲಿ ಯಾವ ವಿದ್ಯಾರ್ಥಿಗಳು ಬರುವುದಕ್ಕೆ ತಯಾರಿಲ್ಲ. ಅಲ್ಲಿನ ಗ್ರಾಮಪಂಚಾಯಿತಿಯವರು ನಮಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ, ನಾವು ಕಟ್ಟಡವನ್ನು ಕೊಡುತ್ತೇವೆ, ಶಾಲೆಯನ್ನು ಊರಲ್ಲಿ ನಡೆಸಬೇಕೆಂದು ಹೇಳಿದ್ದಾರೆ. ಗ್ರಾಮದಿಂದ ದೂರವಿರುವುದರಿಂದ ವಿದ್ಯಾರ್ಥಿಗಳ ಹಾಜರಾತಿ ಕಡಿಮೆ ಇದೆಯೇ ಹೊರತು ಅಲ್ಲಿ 250 ರಿಂದ 300 ವಿದ್ಯಾರ್ಥಿಗಳಿರುವುದನ್ನು ನಾನೇ ಹೋಗಿ ನೋಡಿ ಬಂದಿರುತ್ತೇನೆ. ಆದ್ದರಿಂದ ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಿರ್ಜ ಹಾಗೂ ಹುಡ್ಗಿ ಗ್ರಾಮದಲ್ಲಿರುವ ಕಾಲೇಜನ್ನು ಮಂಡ್ಯ ಜಿಲ್ಲೆಗೆ ವರ್ಗಾಯಿಸಿದ್ದ ಆದೇಶವನ್ನು ರದ್ದುಪಡಿಸಬೇಕು. ಅದು ನಮ್ಮ ತಾಲ್ಲೂಕಿನಲ್ಲಿಯೇ ಇರಬೇಕು, ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಇನ್ನೂ ಕೂಡ ಇರುವ ಅನಾನುಕೂಲಗಳನ್ನು ನಾವು ಗಮನಿಸಬೇಕಾಗಿದೆ. ನಮ್ಮ ರಾಜ್ಯದಲ್ಲಿ 7-8 ವಿಶ್ವವಿದ್ಯಾನಿಲಯಗಳಿವೆ, ಬಿಎಡ್ ವಿಷಯದಲ್ಲಿ ಗುಲ್ಬರ್ಗಾ ವಿಭಾಗದಲ್ಲಿ 450 ಮಾರ್ಕ್ಸ್‌ಗಳು ಇದ್ದರೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 550 ಮಾರ್ಕ್ಸ್‌ಗಳಿವೆ. 100 ಮಾರ್ಕ್ಸ್‌ಗಳ ವ್ಯತ್ಯಾಸಗಳಿರುವುದರಿಂದ ನಮ್ಮ ಭಾಗದ ಬಿಎಡ್ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಇದನ್ನು ಗಮನಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಭಾಗದ ಬಿಎಡ್ ಶಿಕ್ಷಕರ ನೇಮಕಾತಿಯಾಗಲಿ, ಪ್ರಾಥಮಿಕ ಶಿಕ್ಷಕರ ನೇಮಕಾತಿಯಾಗಲಿ, ಜಿಲ್ಲಾ ಮಟ್ಟದಲ್ಲಿ ಆಗಬೇಕೆನ್ನುವ ಬಗ್ಗೆ ತಾವು ವಿಚಾರವನ್ನು ಮಾಡಬೇಕು. ಇದು

ಆಗದಿದ್ದರೆ ವಿಭಾಗ ಮಟ್ಟದಲ್ಲಾದರೂ ಆಗಬೇಕೆನ್ನುವ ಬಗ್ಗೆ ವಿಚಾರವನ್ನು ಮಾಡಬೇಕು. ಇದು ಆಗದಿದ್ದರೆ ವಿಭಾಗ ಮಟ್ಟದಲ್ಲಾದರೂ ಆಗಬೇಕೆನ್ನುವ ಬಗ್ಗೆ ವಿಚಾರವನ್ನು ಮಾಡಬೇಕು. ನಮಗೆ ನ್ಯಾಯ ಸಿಗಬೇಕಾದರೆ ಒಂದು ಸಮಾನತೆ ಸಿಗಬೇಕಾದರೆ, ವಿಭಾಗ ಮಟ್ಟದಲ್ಲಾದರೂ ಆಗಬೇಕೆನ್ನುವುದಕ್ಕೆ ತಮ್ಮ ಗಮನಕ್ಕೆ ತರುತ್ತೇನೆ. ಮಹಾರಾಷ್ಟ್ರದ ವಿದರ್ಭ, ಆಂಧ್ರಪ್ರದೇಶದ ಕಾಕಿನಾಡ ಚಾಲ್ತಿಯಲ್ಲಿದೆ. ಇದನ್ನು ನಮ್ಮ ರಾಜ್ಯದಲ್ಲಿ ಮಾಡಬೇಕು. ಮಾನ್ಯ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹಾಗೂ ಗೃಹಮಂತ್ರಿಗಳೂ ಕೂಡ ಇದರ ಬಗ್ಗೆ ಪ್ರಯತ್ನ ಮಾಡಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನ್ಯೂನತೆಗಳನ್ನು ಸರಿಪಡಿಸಿದರೆ ಮಾತ್ರ ಸಮಾನತೆ ಬರುತ್ತದೆ, ಇಲ್ಲದಿದ್ದರೆ ಬರುವುದಿಲ್ಲ. ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಹಣದಲ್ಲಿ 1800 ರೂಪಾಯಿಗಳ ತಾರತಮ್ಯವಾಗುತ್ತಿದ್ದು, ಇದನ್ನು ಹೋಗಲಾಡಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೂ ಪ್ರತಿಭೆ ಹಾಗೂ ಪುರಸ್ಕಾರಗಳನ್ನು ನೀಡಿದರೆ ನಮ್ಮ ರಾಜ್ಯದ ವಿದ್ಯಾರ್ಥಿಗಳಂತಾಗಿ, ಬೆಳೆಯುವಂತೆ ಮಾಡಬೇಕೆಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಟಿಸಿಹೆಚ್ ಆದ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆ, ಅಲ್ಲಿ ವಿಜ್ಞಾನ ಮತ್ತು ಗಣಿತ ಕಲಿಸತಕ್ಕೂಥದ್ದು, ಅಲ್ಲಿಯ ಶಿಕ್ಷಕರಿಗೆ ತೊಂದರೆಯಾಗುತ್ತದೆಂದು ಶಿಕ್ಷಣತಜ್ಞರಾದ ಡಾ ರಾಜಾರಾಮಣ್ಣನವರು ವರದಿಯನ್ನು ಕೊಟ್ಟಿದ್ದಾರೆ. ಇದೆಲ್ಲವನ್ನೂ ಗಮನಿಸಿ ಆ ಶಾಲೆಗಳಿಗೆ ಬಿಎಸ್ಸ್ಸಿ, ಬಿಎಡ್ ಮುಗಿಸಿದಂತಹ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ ವಿಚಾರ ಮಾಡಬೇಕು. ಈ ಎಲ್ಲಾ ದೃಷ್ಟಿಕೋನವನ್ನಿಟ್ಟುಕೊಂಡು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವುದನ್ನು ಹೋಗಲಾಡಿಸಿ ಸಮಾನತೆಯ ದೃಷ್ಟಿಯಿಂದ ಕ್ರಮವನ್ನು ಕೈಗೊಂಡರೆ ಇದಕ್ಕೆ ಪುಷ್ಠಿ ಕೊಟ್ಟಂತಾಗುತ್ತದೆ. ನನ್ನ ಕ್ಷೇತ್ರದ ಹುಮ್ನಾಬಾದ್ ಪಟ್ಟಣದಲ್ಲಿ ಒಂದು ಪದವಿಪೂರ್ವ ಕಾಲೇಜು ಇದೆ, ಈ ಕಾಲೇಜಿಗೆ 1978-79ರಲ್ಲಿ 21 ಎಕರೆ ಜಮೀನಿತ್ತು. ಇವತ್ತು ಅಲ್ಲಿ ಕೇವಲ 3 ಎಕರೆ 24 ಗುಂಟೆ ಮಾತ್ರ ಜಮೀನು ಉಳಿದಿದೆ, ನಾನು ಪ್ರಶ್ನೆಯನ್ನು ಕೇಳಿದಾಗ ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರಿಸಿರುತ್ತಾರೆ. ಈ ಕಾಲೇಜಿನ ಜಾಗದಲ್ಲಿ ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಜಾಗ ಎಷ್ಟು ಎಂದು ಪ್ರಶ್ನೆ ಕೇಳಿದಾಗ, 16 ಎಕರೆ ಜಮೀನು ಎಂದು ಉತ್ತರವನ್ನು ಕೊಟ್ಟಿರುತ್ತೀರಿ. ನಮ್ಮ ಸರ್ಕಾರದ ಜಾಗವನ್ನು ನಾವು ಹಾಗೂ ಅಲ್ಲಿರುವ ಅಧಿಕಾರಿಗಳು ರಕ್ಷಣೆಯನ್ನು ಮಾಡಹೋದರೆ, ಹೇಗೇ? ಅಲ್ಲಿ ಹೋಟೆಲ್ ಹಾಗೂ ಅಂಗಡಿಗಳನ್ನು ಇಟ್ಟುಕೊಂಡಿರುತ್ತಾರೆ. ಇದರ ಬಗ್ಗೆ ಕೋರ್ಟಿನಲ್ಲಿ ಕೇಸ್ ನಡೆಯುತ್ತದೆಂದು ತಾವು ಹೇಳಿರುತ್ತೀರಿ, ಆ ಕಾಲೇಜಿಗೆ ಪೂರ್ಣ ಕಾಪೌಂಡನ್ನು ಹಾಕಲಾಗಿದೆ. ಕೆಲವೊಬ್ಬರು ಈ ಬಗ್ಗೆ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಅದನ್ನು ವೆಕೇಟ್ ಮಾಡಿಸುವುದಕ್ಕೆ ನಮ್ಮ ಅಧಿಕಾರಿಗಳು ತಯಾರಿಲ್ಲ. ಅಲ್ಲಿರುವ ಡಿ.ಡಿ.ಪಿ.ಐ. ಅಥವಾ ಬಿ.ಇ.ಓ. ಹೋಗಿ ಅದನ್ನು ವೆಕೇಟ್ ಮಾಡಿಸಬೇಕು. ಯಾರೂ ಕೋರ್ಟಿಗೆ ಹೋಗದಿದ್ದರೆ ಸ್ಟೇ ವೆಕೇಟ್ ಹೇಗೆ ಆಗುತ್ತದೆ?

ಶ್ರೀ ಹೆಚ್ ವಿಶ್ವನಾಥ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಇದರ ಬಗ್ಗೆ ನನ್ನ ಜೊತೆ ಪ್ರತ್ಯೇಕವಾಗಿ ಮಾತನಾಡಲಿ, ಇದನ್ನು ಸಾರ್ವ್ ಔಟ್ ಮಾಡೋಣ.

ಶ್ರೀ ಸುಭಾಷ್ ಕಲ್ಲೂರ್ :— ಇದು ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತಿದ್ದು ಅಲ್ಲಿರುವ ಕಾಲೇಜಿನ ಜಾಗವನ್ನು ಆಕ್ರಮಿಸಿಕೊಂಡಿದ್ದು, ಇದನ್ನು ತಾವು ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಂಗಳೂರಿನಲ್ಲಿರುವ ಅನಧಿಕೃತವಾದ ಕಟ್ಟಡಗಳನ್ನು ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿಯಾಗಿ ಕೆಡವಿಸಿದ್ದಾರೆ. ಬೀದರ್ ಹಾಗೂ ಗುಲ್ಬರ್ಗಾ ಭಾಗದಲ್ಲಿ ಕೂಡ ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳನ್ನು ಕೆಡವಿಸಬೇಕೆಂದು ಹೇಳುತ್ತಾ ನಾನು ಕೆಲವು ಸಲಹೆಗಳನ್ನು ಕೊಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :— ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ರಂಗದಲ್ಲಿ ಪ್ರಾಯೋಗಿಕ ಅಸಮಾನತೆಯನ್ನು ಹೋಗಲಾಡಿಸುವ ಬಗ್ಗೆ ಇಲ್ಲಿ ಪ್ರಶ್ನೆ ಸಂಬಂಧಪಟ್ಟಿದ್ದಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಯೋಗಿಕ ಅಸಮಾನತೆಯ ಕೂಗು ಎದ್ದಾಗ, ಪ್ರೊಫೆಸರ್ ಆಲಗ್ ಎನ್ನುವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದರು. ಆ ಸಮಿತಿ ಒಂದು ಸಭೆಯನ್ನೂ ಮಾಡದೆ, ಒಂದು ವರ್ಷ ಕೂಡ ಕೆಲಸವನ್ನು ಮಾಡಲಿಲ್ಲ. ನಂತರ ಡಾ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮಾನತೆಯ ಬಗ್ಗೆ ಅಭ್ಯಸಿಸಲು ಒಂದು ಸಮಿತಿಯನ್ನು ಮಾಡಿದರು. ಡಾ ನಂಜುಂಡಪ್ಪನವರ ಸಮಿತಿ ಬಹಳಷ್ಟು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಮಧ್ಯಂತರ ರಿಪೋರ್ಟ್‌ನ್ನು ಕೊಟ್ಟಿರುತ್ತಾರೆ. ಅಲ್ಲಿ ಅವರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ರಾಜ್ಯದಲ್ಲಿ ಯಾವ ರೀತಿಯಾಗಿ ಪ್ರಾದೇಶಿಕ ಅಸಮಾನತೆ ಇದೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ಮಾನ್ಯ ಶಿಕ್ಷಣಸಚಿವರು ಒಪ್ಪಿಕೊಂಡಿರುವಂತೆ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕವನ್ನು ಕಂಪೇರ್ ಮಾಡಿದಾಗ, ಇವತ್ತು ಶಿಕ್ಷಣ ರಂಗದಲ್ಲಿ ರಾಜ್ಯಸರ್ಕಾರದಿಂದ ಒಬ್ಬ ವಿದ್ಯಾರ್ಥಿಗೆ ಎಷ್ಟು ಹಣ ಖರ್ಚಾಗುತ್ತದೆ, ಇದರ ವ್ಯತ್ಯಾಸದ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಇದರಿಂದ ಉತ್ತರ ಕರ್ನಾಟಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ, ಅದನ್ನು ಸರಿಪಡಿಸಲು ಏನು ಮಾಡಬೇಕು. ಕೆಲವೊಂದು ಕ್ರಮಗಳನ್ನು ಇವರು ಕೈಗೊಡಿರುತ್ತಾರೆ, ಅದು ಅಷ್ಟೇ ಸಾಕಾಗುತ್ತದೆಯೇ ಹೇಗೆ? ಡಾ: ನಂಜುಂಡಪ್ಪನವರ ವರದಿಯಲ್ಲಿ ಕೆಲವೊಂದು ಅಂಕಿಅಂಶಗಳನ್ನು ನೋಡಿದಾಗ ಇಲ್ಲಿ ಬಹಳ ಅಂತರವಿದೆ

ಎಂಬುದು ಗೊತ್ತಾಗುತ್ತದೆ. ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಪ್ರಾಥಮಿಕಶಾಲೆಗಳ ಸಂಖ್ಯೆಯನ್ನು ನೋಡಿದಾಗ ದಕ್ಷಿಣ ಕರ್ನಾಟಕದಲ್ಲಿ

21,943 ಪ್ರಾಥಮಿಕ ಶಾಲೆಗಳಿವೆ. ಉತ್ತರ ಕರ್ನಾಟಕದಲ್ಲಿ 15,741 ಪ್ರಾಥಮಿಕ ಶಾಲೆಗಳಿವೆ. ಆಮೇಲೆ ಮಾಧ್ಯಮಿಕ ಶಾಲೆಗಳು 3,571 ದಕ್ಷಿಣ ಕರ್ನಾಟಕದಲ್ಲಿದ್ದರೆ ಉತ್ತರ ಕರ್ನಾಟಕ ಭಾಗದಲ್ಲಿ 2,161 ಇವೆ. ಪದವಿಪೂರ್ವ ಕಾಲೇಜುಗಳು ದಕ್ಷಿಣ ಕರ್ನಾಟಕದಲ್ಲಿ 331, ಉತ್ತರ ಕರ್ನಾಟಕದಲ್ಲಿ 202. ಆಮೇಲೆ ಡಿಗ್ರಿ ಕಾಲೇಜುಗಳು ದಕ್ಷಿಣ ಕರ್ನಾಟಕದಲ್ಲಿ 668, ಉತ್ತರ ಕರ್ನಾಟಕದಲ್ಲಿ 401. ವಿಶ್ವವಿದ್ಯಾನಿಲಯಗಳು ದಕ್ಷಿಣ ಕರ್ನಾಟಕದಲ್ಲಿ 4, ಉತ್ತರ ಕರ್ನಾಟಕದಲ್ಲಿ 2. ಈ ತರಹ ವ್ಯತ್ಯಾಸಗಳಿವೆ. ಶೇಕಡ 50ಕ್ಕಿಂತ 40ಕ್ಕಿಂತ ಈ ರೀತಿಯ ವ್ಯತ್ಯಾಸವಿದೆ. ಇನ್ನೊಂದು ನಾನು ಎರಡು ವಿಚಾರಗಳನ್ನು ರೆಫರೆನ್ಸ್ ಮಾಡುವಂತಹದ್ದು ಡಾ: ಡಿ.ಎಂ. ನಂಜುಂಡಪ್ಪನವರು ಏನು ಇಂಟೀರಿಯಮ್ ರಿಪೋರ್ಟ್ ಕೊಟ್ಟಿದ್ದಾರೆ ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ First phase of the recommendations of the High-Power Committee for redressal of the Regional Imbalances, ಮೊನ್ನೆ ಫೆಬ್ರವರಿ 28ಕ್ಕೆ ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಕೆಲವೊಂದು ವಿಷಯಗಳನ್ನು ನಾನು ರೆಫರ್ ಮಾಡುತ್ತಿದ್ದೇನೆ. ಈವೊಂದು ಶಾಲೆಗಳು, ಹೈಸ್ಕೂಲ್ ಇರಬಹುದು, ಪ್ರಾಥಮಿಕ ಶಾಲೆಗಳು ಇರಬಹುದು, ಕಾಲೇಜುಗಳು ಇರಬಹುದು ಇವುಗಳ ಬಗ್ಗೆ ಅವರು ಯಾವ ರೀತಿ ಕಂಪೇರಿಷನ್ ಮಾಡಿದ್ದಾರೆಂದರೆ, ಅವರೊಂದು ಕ್ಯಾಟಗರಿ ಮಾಡಿದ್ದಾರೆ. ಮೋರ್ ಬ್ಯಾಕ್‌ವರ್ಡ್ ತಾಲ್ಲೂಕ್ಸ್ ಲೆಸ್ ಬ್ಯಾಕ್‌ವರ್ಡ್ ತಾಲ್ಲೂಕ್ಸ್ ಎಂದು. ಮತ್ತು ರೀಜನ ವೈಸ್ ಅಲ್ಲದೆ ತಾಲ್ಲೂಕು ವೈಸ್ ಒಂದೊಂದು ಕಾಲಂ ಹಾಕಿಕೊಂಡಿದ್ದಾರೆ. ಅಲ್ಲಿ ಹೇಳಿರುವ ಪ್ರಕಾರ ಬೆಳಗಾಂ ವಿಭಾಗದಲ್ಲಿ ಮೋರ್ ಬ್ಯಾಕ್‌ವರ್ಡ್ ತಾಲ್ಲೂಕ್ 13. ಲೆಸ ಬ್ಯಾಕ್‌ವರ್ಡ್ ತಾಲ್ಲೂಕು 18. ಅಂದರೆ ಒಟ್ಟು 31 ಬ್ಯಾಕ್‌ವರ್ಡ್ ತಾಲ್ಲೂಕ್ಸ್. ಇದು ಪ್ರಾಥಮಿಕ ಶಾಲೆಯಲ್ಲಿ. ಆಮೇಲೆ ಗುಲ್ಬರ್ಗಾ ವಿಭಾಗದಲ್ಲಿ ಮೋರ್ ಬ್ಯಾಕ್‌ವರ್ಡ್ 15, ಲೆಸ್ ಬ್ಯಾಕ್‌ವರ್ಡ್ 9. ಒಟ್ಟು 24 ತಾಲ್ಲೂಕುಗಳು. ಆಮೇಲೆ ಮೈಸೂರು ವಿಭಾಗದಲ್ಲಿ ಒಟ್ಟು 15 ತಾಲ್ಲೂಕುಗಳು. ಬೆಂಗಳೂರು ವಿಭಾಗದಲ್ಲಿ 7. ಅಂದರೆ ಉತ್ತರ ಕರ್ನಾಟಕದಲ್ಲಿ ಹಿಂದುಳಿದ ತಾಲ್ಲೂಕುಗಳು 55. ದಕ್ಷಿಣ ಕರ್ನಾಟಕದಲ್ಲಿ 22. ಮೋರ್‌ದೆನ್ ಫಿಫ್ಟಿ ಪರ್ಸೆಂಟ್ ಡಿಫರೆನ್ಸ್ ಇದೆ. ಲಿಟ್ರಸಿ ಇರುವುದು ಅದೇರೀತಿ. ಈ ರೀತಿಯಾದ ಡಿಫರೆನ್ಸ್ ಇರುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಏನು ಮಾಡಬೇಕೆನ್ನುವಂಥದ್ದು ಅದಕ್ಕೆ ಕೆಲವು ರೆಮಿಡಿಗಳನ್ನು ಹೇಳಿದ್ದಾರೆ. ಪ್ರಾಥಮಿಕ ಶಾಲೆಗಳ ಬಗ್ಗೆ ಒಂದು ಕಡೆ ಏನು ಹೇಳುತ್ತಾರೆಂದರೆ,

" In all, there is a shortage of 2864 primary Schools spread across 77 backward taluks in the State. Of these, 77 taluks which have schools less than the state average, 38 taluks are categorised as more backward, 39 as less backward. The approximate cost of

starting a new primary lower school is Rs.4.55 lakhs. The total cost of starting 2864 schools will then work out to be Rs.13031.2 lakhs.

ಅಂದರೆ 13 ಕೋಟಿಗಿಂತ ಜಾಸ್ತಿ ಬರುತ್ತದೆ. ಈ ರೀತಿಯಾದಂತಹ ಏನೊಂದು ಶಿಫಾರಸ್ಸು ಕೊಟ್ಟಿದ್ದಾರೆ. ಇನ್ನೂ ಹೆಚ್ಚಿಗೆ ಹೇಳಬೇಕೆಂದರೆ, ಫೆಬ್ರುವರಿಯೊಳಗೆ ಇಂಟೀರಿಯಮ್ ರಿಪೋರ್ಟ್ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನು ಬಜೆಟ್ ಮಂಡನೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಯಾವ ಪ್ರದೇಶ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಅಲ್ಲಿಗೆ ಹೆಚ್ಚಿನ ಹಣವನ್ನು ಬಜೆಟ್‌ನಲ್ಲಿ ಕೊಡಬೇಕೆನ್ನುವ ದೃಷ್ಟಿಕೋನದಿಂದ ಅವರು ರೆಕಮೆಂಡೇಷನ್ ಮಾಡಿದ್ದಾರೆ. ಬಹುಶಃ ಅದನ್ನು ಕೊಟ್ಟಿದ್ದಾರೋ ಇಲ್ಲವೋ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಪುಟದ ಸಂಖ್ಯೆ 164 ರಲ್ಲಿ ಏನು ಹೇಳುತ್ತಾರೆಂದರೆ

> The Committee has estimated that in the aggregate for the four deprived groups of taluks Rs.1247 crores are required to raise them to the State Average level. Of this, Rs.1067 crores are to be provided in 2002-2003 Budget and the balance of Rs.180 crores in 2002-2003 budget.

ಅಂದರೆ ಇದು 1067 ಕೋಟಿ ಇದು ಶಿಕ್ಷಣಕ್ಕೆ ಅಲ್ಲ, ಎಲ್ಲಾ ಬೇರೆ ಬೇರೆ ದೃಷ್ಟಿಕೋನದಿಂದ 1067 ಕೋಟಿ ಇದೇ ವರ್ಷದ ಬಜೆಟ್‌ನಲ್ಲಿ ತೆಗೆದು ಇಡಬೇಕೆಂದು ಅವರು ರೆಕಮೆಂಡ್ ಮಾಡಿದ್ದರು. ಅದರಲ್ಲಿ ಶಿಕ್ಷಣ ಖಾತೆಗೆ ಎಷ್ಟು ಬರುತ್ತದೆ ಅದನ್ನು ಆಮೇಲೆ ನೋಡೋಣ. ಅದು ಪರ್ಸಂಟೇಜ್ ಪ್ರಕಾರ ಬರುತ್ತದೆ. ಆ ರೀತಿ ಈ ಸಲ ಬಜೆಟ್‌ನಲ್ಲಿ ಹಣ ಬರಲಿಲ್ಲ. ಆದರೆ ಇವತ್ತು ನಾವು ಸಾಕಷ್ಟು ಪ್ರಾದೇಶಿಕ ಅಸಮತೋಲನದ ಬಗ್ಗೆ ಮಾತನಾಡುತ್ತೇವೆ. ಆದರೆ ನಿಜವಾಗಿ ಅನುಷ್ಠಾನವಾಗುವಂತಾದ್ದು, ಇವತ್ತು ಸರ್ಕಾರದವರು ಪ್ರಥಮ ಹೆಜ್ಜೆಯನ್ನು ಇಟ್ಟಿದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟಂತಹ ಮತ್ತು ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟಂತಹ ಏಳು ಜಿಲ್ಲೆಗಳಿಗೆ ಸಂಬಂಧಪಟ್ಟಹಾಗೆ ಒಂದು ಪ್ರತ್ಯೇಕ ಶಿಕ್ಷಣ ನಿರ್ದೇಶನಾಲಯ ಮಾಡಿದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ಶೇಕಡ 50 ರಷ್ಟು ಹಣವನ್ನು ಕೊಡುತ್ತೇನೆ ಎಂದು ಮಾನ್ಯ ಶಿಕ್ಷಣ ಸಚಿವರು ಹೇಳಿದ್ದಾರೆ. ಆದರೆ ಇವತ್ತಿನ ಡಿಸ್‌ಪ್ಯಾರಿಟಿ ನೋಡಿದರೆ ಈ ಅಸಮಾನತೆಯನ್ನು ನೋಡಿದರೆ ಶೇಕಡ 50ರಷ್ಟು ಏನು ಹಣ ತೊಡಗಿಸಿದ್ದೀರಿ ಆ ಹಣ ಸಾಲುವುದಿಲ್ಲ. ನಾನು ಹಿಂದೆ ಸಲಹೆ ಕೊಟ್ಟಿದ್ದೇನೆ, ಕೊನೆಯಪಕ್ಷ 70 ಪರ್ಸೆಂಟ್ ಎರಡು ಮೂರು ವರ್ಷ ಐದು ವರ್ಷ ಏನೊಂದು

ಅಸಮಾನತೆ ಇದೆ ಅದು ಬ್ಯಾಲೆನ್ಸ್‌ಗೆ ಬರುವ ಸಲುವಾಗಿ ಮೂರ್ನಾಲ್ಕು ವರ್ಷಗಳಾದರೂ ಹೆಚ್ಚಿನ ಹಣವನ್ನು ಶೇಕಡ 70ರಷ್ಟು ಬಜೆಟ್‌ನಲ್ಲಿ ತೆಗೆದು ಇಡಬೇಕಾಗಿತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಪ್ರಾಥಮಿಕ ಹಂತದಲ್ಲಿ ಏನು ಮಾಡಿದ್ದೀರಿ ಅದು ಇಲ್ಲಿಗೆ ನಿಲ್ಲಬಾರದು. ದೊಡ್ಡ ಪ್ರಮಾಣದಲ್ಲಿ ಹಣದ ವ್ಯವಸ್ಥೆ ಮತ್ತು ಶಿಕ್ಷಣದ ವ್ಯವಸ್ಥೆ ಆಲ್ಲಿ ಪ್ರಸರಿಸಬೇಕು. ಉತ್ತರ ಕರ್ನಾಟಕದಲ್ಲಿ ಏನಾಗಿದೆ ಅಂದರೆ ಬಹಳಷ್ಟು ಶಿಕ್ಷಣ ಸಂಸ್ಥೆಗಳು ಬೆಳೆದಿವೆ. ಆದರೆ ಎಲ್ಲವೂ ಖಾಸಗಿ ಶಿಕ್ಷಣ ಸಂಸ್ಥೆಗಳು. ಅನುದಾನ ಪಡೆಯುವಂತಹ ಅನುದಾನ ಪಡೆಯಲಾರದ ಖಾಸಗಿ ಶಿಕ್ಷಣ ಸಂಸ್ಥೆಗಳು, ಮಠ ಮಾನ್ಯಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರಬಹುದು. ಡಾ: ಪರಮೇಶ್ವರ್‌ರವರು ಒಂದು ಕಾರ್ಯಕ್ರಮಕ್ಕೆ ಹುಬ್ಬಳ್ಳಿ-ಧಾರವಾಡಕ್ಕೆ ಬಂದಾಗ, ಹುಬ್ಬಳ್ಳಿ-ಧಾರವಾಡದಲ್ಲಿ ಸರ್ಕಾರಿ ಡಿಗ್ರಿ ಕಾಲೇಜು ಇಲ್ಲವೆಂದು ನಾವು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರು ಅಲ್ಲಿಗೆ ಬಂದಿದ್ದರು. ಆಗ ಈ ವರ್ಷದಿಂದ ಒಂದು ಡಿಗ್ರಿ ಕಾಲೇಜು ಕೊಡುತ್ತೇವೆಂದು ಹೇಳಿದರು. ಮೊನ್ನೆ ನೋಟೀಫಿಕೇಷನ್ ಹೊರಡಿಸಿದ್ದಾರೆ. ಒಂದು ಡಿಗ್ರಿ ಕಾಲೇಜು ಮಂಜೂರು ಮಾಡಿದರು. ಕಳೆದ 50 ವರ್ಷಗಳಿಂದ ಹುಬ್ಬಳ್ಳಿ-ಧಾರವಾಡದಲ್ಲಿ ಸರ್ಕಾರದದ್ದು ಒಂದು ಡಿಗ್ರಿ ಕಾಲೇಜು ಇರಲಿಲ್ಲ. ಎಲ್ಲಾ ಖಾಸಗಿಯವರು ನಡೆಸುತ್ತಿದ್ದರು. ಖಾಸಗಿಯವರದ್ದು ಸಮಸ್ಯೆ ಏನಾಗಿದೆ ಅಂದರೆ, ಇವತ್ತು ಯಾರೋ ಒಬ್ಬ ಬಡ ವಿದ್ಯಾರ್ಥಿ ಸಮಾಜದಲ್ಲಿ ಹಿಂದುಳಿದಂತಹ ವರ್ಗದವರ ವಿದ್ಯಾರ್ಥಿ ಯಾವುದೇ ಒಂದು ಕಾಲೇಜಿಗೆ ಸೇರಬೇಕಾದರೆ ಡೊನೇಷನ್ ಇಲ್ಲದೆ ಹೋಗುವುದಕ್ಕೆ ಸಾಧ್ಯವಿಲ್ಲ. 5 ಸಾವಿರ, 10 ಸಾವಿರ, 20 ಸಾವಿರ 30 ಸಾವಿರ ಡೊನೇಷನ್ ಕೊಟ್ಟೇ ಅಲ್ಲಿ ಅಡ್ಮಿಷನ್ ತೆಗೆದುಕೊಳ್ಳಬೇಕು. ಆದೇ ಸರ್ಕಾರಿ ಕಾಲೇಜು ಇದ್ದರೆ ಬೇಕಾದ ರೀತಿಯಲ್ಲಿ ಅಡ್ಮಿಷನ್ ಆಗಲಿಕ್ಕೆ ಸಾಧ್ಯವಿದೆ. ಈವೊಂದು ಅಸಮಾನತೆ ಏನಿದೆ ಅದನ್ನು ಹೋಗಲಾಡಿಸಲಿಕ್ಕೆ ಇವತ್ತು ಪ್ರಿಲಿಮಿನರಿಯಾಗಿ ಜಾರಿಮಾಡಿದ್ದೀರಿ ಇದಕ್ಕೆ ಹೆಚ್ಚು ಒತ್ತು ಕೊಟ್ಟು ಆಗಬೇಕೆನ್ನುವಂತಹದ್ದು ಇದೆಯೆಂದು ಹೇಳಲಿಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರ ನಾನು ಆಗಲೇ ಹೇಳಿದ ಪ್ರಕಾರ ಬಿಎಡ್ ಶಿಕ್ಷಕರನ್ನು ನೇಮಕಾತಿಯ ಬಗ್ಗೆ. ಇವತ್ತು ಏನು ಬೇರೆ ಬೇರೆ ಯೂನಿವರ್ಸಿಟಿಗಳಲ್ಲಿ ಇಂಟರ್‌ನಲ್ ಅಸೆಸ್‌ಮೆಂಟ್ ಮಾರ್ಕ್ಸ್ ಏನಿದೆಯಲ್ಲಾ ಅದು ವ್ಯತ್ಯಾಸವಿದೆ. ಅದು ಏಕೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಕರ್ನಾಟಕ ಯೂನಿವರ್ಸಿಟಿ ಇರಬಹುದು, ಗುಲ್ಬರ್ಗ ಯೂನಿವರ್ಸಿಟಿ ಇರಬಹುದು, ಇಂಟರ್‌ನಲ್ ಅಸೆಸ್‌ಮೆಂಟ್ ಮಾರ್ಕ್ಸ್ ಏನಿದೆ ಅದು 400 ಇದೆ. ಆದೇ ಬೆಂಗಳೂರು, ಮೈಸೂರು, ಮಂಗಳೂರು, ಕುವೆಂಪು ಯೂನಿವರ್ಸಿಟಿಗಳಲ್ಲಿ 460ರಿಂದ 600 ಮಾರ್ಕ್ಸ್ ಇದೆ. ಈ ಡಿಫರೆನ್ಸ್ ತೆಗೆದುಹಾಕಬೇಕು. ಈಗ ನೀವು ಎರಡು ಸಾವಿರ ಜನ ಬಿಎಡ್ ಶಿಕ್ಷಕರನ್ನು ನೇಮಕ ಮಾಡಲಿಕ್ಕೆ ಹತ್ತಿದ್ದೀರಿ, ಆ ಮೆರಿಟ್ ಮೇಲೆ ನೀವು ಆಯ್ಕೆ ಮಾಡುವುದಾದರೆ ನಾಳೆ ಕರ್ನಾಟಕ ಯೂನಿವರ್ಸಿಟಿ ಮತ್ತು ಗುಲ್ಬರ್ಗ

ಯೂನಿವರ್ಸಿಟಿಯವರು ಒಬ್ಬರೂ ಸೆಲೆಕ್ಟ್ ಆಗುವುದಿಲ್ಲ. ಅದಕ್ಕಾಗಿ ನಾನೊಂದು ಪ್ರಪೋಸಲ್ಸ್ ಮಾಡಿದ್ದೇನೆ ಕೊಟ್ಟಿದ್ದೇನೆ. ದಯವಿಟ್ಟು ನೀವು ಸಿಇಟಿ ಮಾದರಿಯಲ್ಲಿ ಮಾಡಿದರೆ ಬೇಕಾದ ವಿಭಾಗದವರು ಬರಲಿ ಅವರು ಮೆರಿಟ್ ಇದ್ದವರು ಬರಲಿ ಆ ರೀತಿ ನೀವು ಮಾಡಿದರೆ ಅನುಕೂಲವಾಗುತ್ತದೆ. ಈಗ ನೀವು ಬಿಎಡ್ ಶಿಕ್ಷಕರನ್ನು ತುಂಬಲಿಕ್ಕೆ ಹಾಲ್‌ಫಾರ್ ಮಾಡಿದ್ದೀರಿ. ಬಹಳಷ್ಟು ವಿದ್ಯಾರ್ಥಿಗಳು ಅರ್ಜಿಗಳನ್ನು ಹಾಕುತ್ತಿದ್ದಾರೆ. ಬೆಂಗಳೂರು ಮತ್ತು ಮೈಸೂರು ಭಾಗದವರು ಗುಲಬರ್ಗ ಭಾಗಕ್ಕೆ ಅರ್ಜಿಗಳನ್ನು ಹಾಕಿದರೆ ಅವರ ಮಾರ್ಕ್ಸ್ ನೋಡಿದರೆ ನಮ್ಮವರು ಒಬ್ಬರೂ ಸೆಲೆಕ್ಟ್ ಆಗುವುದಿಲ್ಲ. ಈಗಾಗಲೇ ಪ್ರೊಸೀಜರ್ ನಾವು ಚಾಲೂ ಮಾಡಿದ್ದೇವೆ ಸಿಇಟಿ ಮಾದರಿಯಲ್ಲಿ ಮಾಡಲಿಕ್ಕೆ ಆಗುವುದಿಲ್ಲವೆಂದರೆ, ಮುಂದಿನ ವರ್ಷ ಕನ್ಸಿಡರ್ ಮಾಡುತ್ತೇವೆಂದರೆ ಈಗ ಇರುವಂತಹ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈಗ ವಯೋಮಿತಿ ಮೀರಿದವರು ಇದ್ದಾರೆ. ಅವರಿಗೆ ಅನ್ಯಾಯ ಮಾಡಿದಹಾಗೆ ಆಗುತ್ತದೆ. ತಕ್ಷಣ ಸಿಇಟಿ ಮಾದರಿಯಲ್ಲಿ ನೇಮಕಾತಿ ಪ್ರಕ್ರಿಯೆ ಮಾಡಿದರೆ ಬಹುಶಃ ಎಲ್ಲರಿಗೂ ನ್ಯಾಯ ಸಿಗುತ್ತದೆನ್ನುವ ವಿಚಾರಗಳನ್ನು ಹೇಳಿ, ಈವೊಂದು ಪ್ರಾದೇಶಿಕ ಅಸಮತೋಲನ ಏನಿದೆ ಶಿಕ್ಷಣ ರಂಗದಲ್ಲಿ ಅದನ್ನು ತೊಡೆದು ಹಾಕಲಿಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಸೂಚನೆಯನ್ನು ಕೊಟ್ಟು ಅದಕ್ಕೆ ತಾವು ಸ್ಪಂದನ ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :— ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ನಾವು ಮಾಡಿರುವ ಕೆಲಸವನ್ನು ಮೆಚ್ಚಿ ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಬೇರೆ ಬೇರೆ ಕಡೆ ಹೇಗೆ ಶಿಕ್ಷಣದಲ್ಲಿ ವ್ಯತ್ಯಾಸವಿದೆ ಎನ್ನುವುದನ್ನೂ ಕೂಡ ಹೇಳಿದ್ದಾರೆ. ಬಹುಶಃ ಡಾ: ಡಿ.ಎಂ. ನಂಜುಂಡಪ್ಪನವರ ಸಮಿತಿಯ ವರದಿಯನ್ನು ಜಾರಿಗೆ ತರುವುದಕ್ಕೆ ಪ್ರಥಮವಾದ ಹೆಜ್ಜೆಯನ್ನು ನಾವು ಇಟ್ಟಿದ್ದೇವೆ. ಅವರ ವರದಿಯ ಆಧಾರದ ಮೇಲೆ ಅಸಮಾನತೆಯನ್ನು ಹೋಗಲಾಡಿಸಲಿಕ್ಕೆ ಮೂರು ವರ್ಷದ ಟೈಮ್‌ಬೌಂಡ್ ಪ್ರೋಗ್ರಾಮ್‌ನ್ನು ನಾವು ಹಾಕಿಕೊಂಡಿದ್ದೇವೆ. 311 ಕೋಟಿ ರೂಪಾಯಿಗಳಿಗೆ ನಾವು ಕಾರ್ಯಸೂಚಿಯನ್ನೂ ಕೂಡ ನಾವು ಮಾಡಿದ್ದೇವೆ. ಅದರಲ್ಲಿ ನಾನು ಈ ಸದನಕ್ಕೆ ಬಹಳ ಅಭಿಮಾನದಿಂದ ತಿಳಿಸುತ್ತಿದ್ದೇನೆ, ನಮ್ಮಲ್ಲಿರತಕ್ಕ ಬಜೆಟ್‌ನಲ್ಲಿ ಸಂಬಳವನ್ನು ಹೊರತುಪಡಿಸಿ ಸೌಲಭ್ಯಕ್ಕಾಗಿರತಕ್ಕ 296 ಕೋಟಿ ರೂಪಾಯಿಗಳಲ್ಲಿ 162 ಕೋಟಿ ಅಂದರೆ ಶೇಕಡ 55 ಭಾಗವನ್ನು ಉತ್ತರ ಕರ್ನಾಟಕದ ಏಳು ಜಿಲ್ಲೆಗಳಿಗೆ ಕೊಟ್ಟು ಇನ್ನು ಉಳಿದದ್ದನ್ನು 21 ಜಿಲ್ಲೆಗಳಿಗೆ ಕೊಟ್ಟಿದ್ದೇವೆಂದರೆ ರಾಜಕೀಯ ಇಚ್ಛಾಶಕ್ತಿಯನ್ನೂ ಕೂಡ ತಾವು ಮೆಚ್ಚಬೇಕಾಗುತ್ತದೆ. ಸ್ವಾತಂತ್ರ್ಯಾನಂತರದಲ್ಲಿ ಯಾವುದಾದರೂ ಒಂದು ಸರ್ಕಾರ ತನ್ನ ರಾಜಕೀಯ ಇಚ್ಛಾಶಕ್ತಿಯನ್ನು ಈ ಕ್ಷೇತ್ರದಲ್ಲಿ ಪ್ರದರ್ಶನ ಮಾಡಿದ್ದರೆ ಬಹುಶಃ ಅದು ನಮ್ಮ ಸರ್ಕಾರವೆಂದು ಹೇಳಿಕೊಳ್ಳುವುದಕ್ಕೆ ನನಗೆ

ಅಭಿಮಾನವಾಗುತ್ತದೆ. ಆದ್ದರಿಂದ ತಾವು ಈಗ ಸಿ.ಇ.ಟಿ. ಮಾದರಿ ಬಗ್ಗೆ ಹೇಳಿದಿರಿ. ಈಗಾಗಲೇ ಬ್ಲಾಕ್‌ಮಟ್ಟದಲ್ಲಿ ಟಿ.ಸಿ.ಎಚ್. ಅಧ್ಯಾಪಕರುಗಳನ್ನು ತೆಗೆದುಕೊಳ್ಳುವುದಕ್ಕೆ ಸಿ.ಇ.ಟಿ. ಮಾದರಿಯಲ್ಲೇ ಹೋಗಿದ್ದೇವೆ. ಆದರೆ ಹೈಸ್ಕೂಲುಗಳಿಗೆ ಹೈಯರ್ ಸೆಕೆಂಡರಿಗೆ ನಾವು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಅದು ಈಗ ಬಹಳ ಅವಶ್ಯಕತೆ ಇರುವುದರಿಂದ ನಾವು ಗುಲ್ಬರ್ಗಾ ಡಿವಿಜನ್‌ನಲ್ಲಿ ಸುಮಾರು ಆರುನೂರಕ್ಕೂ ಮೀರಿ ಶಿಕ್ಷಕರನ್ನು ಅವರ ಮಾರ್ಕ್ಸ್ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದೇವೆ. ಮುಂದಿನ ದಿವಸಗಳಲ್ಲಿ ಪ್ರೌಢಶಾಲೆಗಳಿಗೆ ಶಿಕ್ಷಕರುಗಳನ್ನು ಸಿ.ಇ.ಟಿ. ಮಾದರಿಯಲ್ಲಿ ತುಂಬುವಂಥ ಸಂದರ್ಭದಲ್ಲಿ ತಾವೇನು ಸಲಹೆ ಕೊಟ್ಟಿದ್ದೀರಿ ಹಾಗೆ ತೆಗೆದುಕೊಳ್ಳತಕ್ಕದ್ದನ್ನು ನಾವು ಮಾಡುತ್ತೇವೆ. ಆದ್ದರಿಂದ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ದಿಕ್ಕಿನಲ್ಲಿ ಹೋಗುತ್ತೇವೆ ಎಂದು ನಾಡಿನ ಜನರಿಗೆ ಏನು ಭರವಸೆಯನ್ನು ಕೊಟ್ಟಿದ್ದೇವೆ, ಆ ಭರವಸೆಯ ಅನುಷ್ಠಾನದಲ್ಲಿ ಬಹಳ ಸಮರ್ಥವಾಗಿ ಅದು ಬರೇ ಕಾಗದದ ಮೇಲೆ ಅಲ್ಲ ಈಗಾಗಲೇ ಅಲ್ಲಿ ನಿರ್ದೇಶನಾಲಯ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೃಹಮಂತ್ರಿಗಳಾದ ಶ್ರೀ ಖರ್ಗೆಯವರು ಗುಲ್ಬರ್ಗಾದಲ್ಲಿ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ಈ ಹಿಂದುಳಿದ ಪ್ರದೇಶಗಳು ಏನಿವೆ, ಅವುಗಳ ಅಭಿವೃದ್ಧಿ ಬಗ್ಗೆ ಈ ಅಸಮತೋಲನ-ತಾರತಮ್ಯ ಏನಿದೆ ಅದನ್ನು ತೆಗೆದುಹಾಕುವುದಕ್ಕೆ ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ ನಾವು ಸೂಚನೆ ಮಾಡುತ್ತೇವೆ ಎನ್ನುವಂಥಾದ್ದನ್ನು ಹೇಳಿದ್ದೀರಿ. ಈ ಸೂಚನೆ ಏನಿದೆ ಅದು ಬಹಳ ಒಳ್ಳೆಯದು. ಇದು ಮಹಾರಾಷ್ಟ್ರದಲ್ಲಿ, ಆಂಧ್ರಪ್ರದೇಶದಲ್ಲಿ ಮಾಡಿದ್ದು, ತೆಲಂಗಾಣ-ವಿದರ್ಭ ಬಗ್ಗೆ ಸಂವಿಧಾನ ತಿದ್ದುಪಡಿಯನ್ನು ಮಾಡಿದ್ದಾರೆ. ಅದರ ಪ್ರಕಾರ ಯಾವುದು ಹಿಂದುಳಿದ ಪ್ರದೇಶಗಳೆಂದು ನೀವು ಇಯರ್‌ಮಾರ್ಕ್ ಮಾಡುತ್ತೀರಿ, ಇನ್ನಷ್ಟು ಆ ಪ್ರದೇಶಗಳಿಗೆ ಆದ್ಯತೆ ಕೊಡಬೇಕು, ರಿಸರ್ವೇಷನ್ ಕೊಡಬೇಕು ಎನ್ನುವಂಥ ದೃಷ್ಟಿಕೋನದಿಂದ ನಮ್ಮ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ಈ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ಅದಕ್ಕೆ ಅಂತಹ ಪ್ರದೇಶಗಳನ್ನು ಇಯರ್‌ಮಾರ್ಕ್ ಮಾಡಿ ತಾವು ಈ ಸದನದಲ್ಲಿ ಸೂಚನೆಯನ್ನು ತೆಗೆದುಕೊಂಡು ಬಂದರೆ ನಾವೆಲ್ಲರೂ ಸಹ ಸಂವಿಧಾನ ತಿದ್ದುಪಡಿ ಮಾಡುವುದಕ್ಕೆ ಅವಿರೋಧವಾಗಿ ತೀರ್ಮಾನವನ್ನು ತೆಗೆದುಕೊಂಡು ಲೋಕಸಭೆಗೆ ಕಳುಹಿಸೋಣ. ಮೊನ್ನೆ ತಾವೇನು ಹೇಳಿದ್ದೀರಿ, ಅಷ್ಟೇ ತರಾತುರಿಯಲ್ಲಿ ಅದು ಬರೇ ಹೇಳಿಕೆಯಾಗಿ ಉಳಿಯಬಾರದು. ಅಧಿವೇಶನದಲ್ಲೇ ಈ ಒಂದು ಸಂವಿಧಾನ ತಿದ್ದುಪಡಿ ಸಲುವಾಗಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದರೆ ನಾವೆಲ್ಲರೂ ಒಪ್ಪಿಗೆ ಕೊಡುತ್ತಿದ್ದೆವು. ಏಕೆಂದರೆ ಇದರ ಬಗ್ಗೆ ಹಿಂದೆ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಆದಷ್ಟು ಬೇಗ ಈ ಒಂದು ತಿದ್ದುಪಡಿಯನ್ನು ತಾವು ತರಬೇಕೆಂದು ನನ್ನ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ ಈಗಾಗಲೇ ಆರ್ಟಿಕಲ್ 371ಕ್ಕೆ ತಿದ್ದುಪಡಿ ಮಾಡಿ ನಮಗೂ ಕೂಡ ಅನುಕೂಲ ಮಾಡಿಕೊಡಬೇಕು ಎನ್ನತಕ್ಕಂಥ ದಿಕ್ಕಿನಲ್ಲಿ ನಾವು ಆ ತಿದ್ದುಪಡಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ನಮ್ಮ ಕ್ಯಾಬಿನೇಟ್ ಸಬ್‌ಕಮಿಟಿಯಲ್ಲಿ ಕೂಡ ಇದನ್ನು ನಾವು ಪಾಸ್ ಮಾಡಿ ತಾವು ಹೇಳಿದಹಾಗೆ ತೆಲಂಗಾಣ-ವಿದರ್ಭಾ ಈ ಭಾಗದಲ್ಲಿ ಯಾವ ರೀತಿಯಾಗಿ ಅಂದರೆ 371 ಆರ್ಟಿಕಲ್‌ನಲ್ಲಿ ಎ-ಬಿ-ಸಿ-ಡಿ ಎಂದು ತಿದ್ದುಪಡಿಗಳಾಗಿವೆ. ವಿದರ್ಭಾಕ್ಕೆ ಅನುಗುಣವಾಗಿ, ತೆಲಂಗಾಣಕ್ಕೆ ಅನುಗುಣವಾಗಿ, ಗುಜರಾತ್ ಮತ್ತು ಮುಂಬಯಿ ಹೀಗೆ ಬೇರೆಬೇರೆ ರಾಜ್ಯಗಳಲ್ಲಿ ಕೂಡ ಹಿಂದುಳಿದ ಭಾಗಗಳಿಗೆ ಒತ್ತು ಕೊಡುವುದಕ್ಕೋಸ್ಕರ ಸಂವಿಧಾನ ತಿದ್ದುಪಡಿಯನ್ನು ತಂದಿರುವಂತೆ ನಾವೂ ತಂದರೆ ನಮಗೆ ಆ ಭಾಗದ ಜನರಿಗೆ ಅವರ ಏಳಿಗೆಗಾಗಿ ಏನಾದರೂ ಒಂದು ಹೊಸ ಕಾನೂನನ್ನು ತಂದರೆ, ಆ ಕಾನೂನಿನ ಪ್ರಕಾರ ಅವರಿಗೆ ಸಹಾಯಮಾಡುವುದಕ್ಕೆ ಆಗುತ್ತದೆ. ಏಕೆಂದರೆ ಆರ್ಟಿಕಲ್ 14ರಪ್ರಕಾರ ಈಕ್ವೆಲಿಟಿ ಬಿಫೋರ್ ಲಾ- ಆಂದಾಗ ಹೊಡೆದುಹಾಕತಕ್ಕಂಥ ಸಾಧ್ಯತೆ ಇರುತ್ತದೆ. ಅದಕ್ಕೆ ಈ ಒಂದು ಪ್ರಾವಿಷನ್‌ನ್ನು ಸಂವಿಧಾನದಲ್ಲಿ ಸೇರಿಸಿಕೊಂಡರೆ, ನಮ್ಮ ರಾಜ್ಯ ಕೂಡ ಅದರಲ್ಲಿ ಸೇರಿಕೊಂಡರೆ ಬಹುಶಃ ನಾವು ಸಮಾನತೆಯ ದೃಷ್ಟಿಯಿಂದ ತಾರತಮ್ಯದ ಕಾನೂನು ಮಾಡಿದರೂ ಕೂಡ ಅದು ಆಪ್-ಹೋಲ್ಡ್ ಆಗುತ್ತದೆ. ಅದಕ್ಕಾಗಿ ಈಗಾಗಲೇ ಅದನ್ನು ತಯಾರುಮಾಡಿ ನಮ್ಮ ಕ್ಯಾಬಿನೆಟ್ ಸಬ್-ಕಮಿಟಿಯಲ್ಲಿಟ್ಟಿದ್ದಾರೆ. ಅದು ಕ್ಯಾಬಿನೆಟ್ ಮುಂದೆ ಬಂದು ಅಪ್ರೂವ್ ಆದ ತಕ್ಷಣ ಅದು ಸದನದ ಮೂಲಕ ಬರಬೇಕೋ ಅಥವಾ ನೇರವಾಗಿ ಕಳುಹಿಸುತ್ತೇವೆಯೋ ಗೊತ್ತಿಲ್ಲ. ಆದರೆ ಈಗಾಗಲೇ ಅದನ್ನು ತಯಾರು ಮಾಡಿದ್ದೇವೆ. ಅದು ತಕ್ಷಣ ತರತಕ್ಕಂಥ ಎಲ್ಲಾ ಪ್ರಯತ್ನಗಳನ್ನೂ ಕೂಡ ನಾವು ಮಾಡುತ್ತೇವೆ. ಮತ್ತು ಕಾನೂನು ಮಂತ್ರಿಗಳೂ ಕೂಡ ಇದರ ಬಗ್ಗೆ ಸ್ಪೀಡ್‌ಆಪ್ ಮಾಡಿ, ಏಕೆಂದರೆ ಕಾನೂನು ಇಲಾಖೆಯವರು ಪರಿಶೀಲನೆ ಮಾಡಿ, ಕಾನೂನು ಚೌಕಟ್ಟಿನಲ್ಲಿ ಆ ಭಾಗಗಳನ್ನು ಅಥವಾ ಆ ಸೆಕ್ಷನ್‌ಗಳನ್ನು ತರತಕ್ಕದ್ದನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಅವರಿಗೂ ಕೂಡ ನಾನು ಕೇಳಿಕೊಂಡಿದ್ದೇನೆ. ಆದಷ್ಟು ಬೇಗನೆ ಆರ್ಟಿಕಲ್ 371ಕ್ಕೆ ತಿದ್ದುಪಡಿಯನ್ನು ತಂದು ಹಿಂದುಳಿದ ಭಾಗಕ್ಕೆ ಹೆಚ್ಚಿನ ನ್ಯಾಯವನ್ನು ದೊರಕಿಸಿಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂದು ಪುನಃ ಮತ್ತೊಮ್ಮೆ ನಾನು ದೃಢೀಕರಿಸುತ್ತೇನೆ. ಮತ್ತೆ ಮಾನ್ಯ ವಿಶ್ವನಾಥ್ ಅವರು ಈಗಾಗಲೇ ಹೇಳಿದಹಾಗೆ ನಿಜವಾಗಿಯೂ ಮೆಚ್ಚತಕ್ಕಂಥ ಕೆಲಸವನ್ನು ಅವರು ಮಾಡಿದ್ದಾರೆ. ಇವತ್ತು ಏಳು ಜಿಲ್ಲೆಗಳಿಗೆ ಶಕ್ಷಣ ಕ್ಷೇತ್ರದಲ್ಲಿ ಏನು ಆ ಭಾಗ ಅತ್ಯಂತ ಹಿಂದುಳಿದ ಭಾಗ ಇದೆ ಸಾಕ್ಷರತೆ ಶೇಕಡಾವಾರು ಮೇಲೆ, ಡ್ರಾಪ್‌ಔಟ್ ಮೇಲೆ ಇದೆಲ್ಲವನ್ನೂ ಲೆಕ್ಕಹಾಕಿಕೊಂಡು ಮತ್ತು ಆ ಭಾಗದಲ್ಲಿ ಎಷ್ಟು ಹೈಸ್ಕೂಲ್‌ಗಳಿವೆ, ಪ್ರಾಥಮಿಕ ಶಾಲೆಗಳಿವೆ, ಎಷ್ಟು ಮಕ್ಕಳು, ಅವರು ಹೇಳುತ್ತಿದ್ದರು ಏನೆಂದರೆ 1ರಿಂದ 7ನೇ ತರಗತಿಯಲ್ಲಿ ಸುಮಾರು ಹತ್ತು ಲಕ್ಷ ಡ್ರಾಪ್‌ಔಟ್‌ನಲ್ಲಿ ಆರು

ಲಕ್ಷ ಮಕ್ಕಳು ಬರೇ ಹೈದರಾಬಾದ್ ಕರ್ನಾಟಕದವರು ಇದ್ದಾರೆ ಎಂದು. ಅಂದರೆ ಈ ಏಳು ಜಿಲ್ಲೆಗಳಿಂದ ಇಷ್ಟು ಮಕ್ಕಳು ಇದ್ದಾರೆ. ಇದರೊಳಗೆ ಮತ್ತೆ ಈ ಆರು ಲಕ್ಷದಲ್ಲಿ ಸುಮಾರು ಒಂದು ಲಕ್ಷ ಎಪ್ಪತ್ತು ಸಾವಿರದಷ್ಟು ಬರೇ ಗುಲ್ಬರ್ಗಾದವರು ಇದ್ದಾರೆ; ಬೀದರ್‌ದವರು 80 ಸಾವಿರದಷ್ಟು ಇದ್ದಾರೆ, ಮತ್ತು ಕೊಪ್ಪಳ, ರಾಯಚೂರು ಎಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಹೆಚ್ಚುಕಡಿಮೆ ಆರು ಲಕ್ಷದಲ್ಲಿ ಐದು ಲಕ್ಷ ಜನ ಈ ನಾಲ್ಕೈದು ಜಿಲ್ಲೆಯವರು ಇದ್ದಾರೆ. ನಮ್ಮ ಗತಿಯೇನಾಗಿದೆಯೆಂದರೆ 'ಎ' ಕ್ಲಾಸ್ ಹಳೆ ಮೈಸೂರು ಆದರೆ, 'ಬಿ' ಕ್ಲಾಸ್ ಬೊಂಬಾಯಿ ಕರ್ನಾಟಕ. ನಾವು 'ಸಿ' ಕ್ಲಾಸಿನಲ್ಲಿ ಇದ್ದೇವೆ. ನಾವು ನಿಮ್ಮ ಜತೆಯಲ್ಲಿ ಬರಬೇಕಾದರೆ ಇನ್ನೂ ಸ್ವಲ್ಪ ತೊಂದರೆ ಇದೆ. ಈಗೇನೋ ಒಂದು ಹೆಚ್ಚೆಯಷ್ಟು ವಿಶ್ವನಾಥ್‌ರವರು ಮುಂದಕ್ಕೆ ತಳ್ಳಿದ್ದಾರೆ. ಆದರಲ್ಲಿ ಬಿಜಾಪುರ ಮತ್ತು ಬಾಗಲಕೋಟೆಯೂ ಸೇರಿಕೊಂಡಿದೆ. ಇಲ್ಲದಿದ್ದರೆ 'ಎ' ಮತ್ತು 'ಬಿ' ಕ್ಲಾಸ್‌ನವರ ಜೊತೆಯಲ್ಲಿ 'ಸಿ' ಕ್ಲಾಸಿನವರೂ ಬರಬೇಕಾಗುತ್ತದೆ. ಅದಕ್ಕೆ ಸಾವಿರಾರು ಕೋಟಿ ರೂ.ಗಳನ್ನು ಹಂಚುವಾಗಿ ಡಾ: ನಂಜುಂಡಪ್ಪನವರನ್ನೂ ಕೂಡ ಈ ಲೆಕ್ಕದಲ್ಲಿ ಹಾಕಬೇಕಾಗುತ್ತದೆ. ಇನ್ನು ಮುಂದೆ ಕೂಡ ಮಾಡುವಾಗ ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಈ ಮಾತನ್ನು ನಾನು ಇಲ್ಲಿ ಹೇಳುತ್ತಿಲ್ಲ. ಮುಖ್ಯಮಂತ್ರಿಗಳು ಸಂಯುಕ್ತ ಕರ್ನಾಟಕ ಪತ್ರಿಕೆಯ ಉದ್ಘಾಟನಾ ಸಂದರ್ಭದಲ್ಲಿ ಬಂದಾಗ ಕೂಡ ಅಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅಲ್ಲಿ ಶ್ರೀ ಹೆಚ್.ಕೆ. ಪಾಟೀಲರೂ ಕೂಡ ಇದ್ದರು. ಹೈದರಾಬಾದ್ ಕರ್ನಾಟಕ 'ಸಿ' ಕ್ಲಾಸಿನಲ್ಲಿದೆ, ಬಾಂಬೆ ಕರ್ನಾಟಕ 'ಬಿ' ಕ್ಲಾಸಿನಲ್ಲಿದೆ ಮತ್ತು 'ಎ' ಕ್ಲಾಸಿನಲ್ಲಿ ಹಳೆ ಮೈಸೂರು ಇದೆಯೆಂದು ನಾನು ಅಲ್ಲಿ ಹೇಳಿದ್ದೇನೆ. ಅದಕ್ಕೆ ಇಲ್ಲಿ ಕೂಡ ಸರಿಸಮಾನತೆ ದೃಷ್ಟಿಯಿಂದ ವಿಶಿಷ್ಟವಾದ ಕಾನೂನುಗಳನ್ನು ನಾವು ಜಾರಿಗೆ ತರಬೇಕಾಗುತ್ತದೆ. ಅದಕ್ಕೆ ಎಲ್ಲರೂ ಕೂಡ ಪ್ರಯತ್ನ ಮಾಡಬೇಕು, ಸಹಕರಿಸಬೇಕು. ತಾವು ಹೇಳಿದ ಹಾಗೆ ನಾವು ಎಲ್ಲರೂ ಕೂಡ ಸಹಕರಿಸಿದಾಗ ಮಾತ್ರ ಇದು ಸಾಧ್ಯವಿದೆ. ಇಲ್ಲದಿದ್ದರೆ ಅನೇಕ ಸಾರಿ ನಾವು ಇಲ್ಲಿ ನಮ್ಮ ತಾಲ್ಲೂಕು, ನಮ್ಮ ಊರು-ಅಲ್ಲಿಗೆ ಕೊಡಿ ಎಂದು ಕಚ್ಚಾಡುತ್ತೇವೆ. ಒಂದು ಸಲಹೆಯನ್ನು ಮಾನ್ಯ ಸೋಮಶೇಖರ್ ಅವರು ಮಾಡಿದರು. ನಿಜವಾಗಿಯೂ ಅದು ಬಹಳ ಒಳ್ಳೆಯ ಸಲಹೆ. ಈ ಬ್ಲಾಕ್ ಸಿಸ್ಟಮ್ ಮಾಡಿದಾಗ, ಇಂತಿಂಥ ವೆಕೆಂಟ್ ಬ್ಲಾಕ್‌ನಲ್ಲಿ ಅದು ಶಾಲೆಗಳನ್ನು ತೆಗೆಯತಕ್ಕದ್ದು ಆಗಲಿ, ಕಾಲೇಜನ್ನು ತೆಗೆಯತಕ್ಕದ್ದು ಆಗಲಿ, ಆಸ್ಪತ್ರೆ ತೆಗೆಯತಕ್ಕದ್ದು ಮಾಡಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಆ ಬ್ಲಾಕ್ ಖಾಲಿ ಇದೆ, ಅದಕ್ಕೆ ಅಲ್ಲಿ ಆಸ್ಪತ್ರೆ ಕೊಟ್ಟಿದ್ದಾರೆ, ಅಥವಾ ಆ ಏರಿಯಾದಲ್ಲಿ ಹೈಸ್ಕೂಲ್ ಇರಲಿಲ್ಲ, ಅದಕ್ಕೇ ಕೊಟ್ಟಿದ್ದಾರೆ, ಇಷ್ಟು ಮಕ್ಕಳ ಸಂಖ್ಯೆ ಇದೆಯೆಂದು ಹೇಳುತ್ತಾರೆ. ಆದ್ದರಿಂದ ಇದನ್ನು ಮಾಡುವುದರಿಂದ ನಿಜವಾಗಿಯೂ ಕೂಡ ಹಿಂದುಳಿದ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಆರ್ಟಿಕಲ್ 371ಕ್ಕೆ ತಿದ್ದುಪಡಿಯನ್ನು ತರಬೇಕೆಂದು ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ. ಬಹುಶಃ ಈ ಸದನದಲ್ಲಿ ಬೇಗನೆ ತರತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:— ಸನ್ಮಾನ್ಯ ಖರ್ಗೆಯವರು ಹೇಳಿದಹಾಗೆ ದುರ್ದೈವದಿಂದ ಏನಾಗಿದೆ ಎಂದರೆ ಬಾಂಬೆ ಕರ್ನಾಟಕ 'ಬಿ' ಕ್ಲಾಸ್, ಅವರದ್ದು 'ಸಿ' ಕ್ಲಾಸ್ ಎಂದರೆ. ಬಾಂಬೆ ಕರ್ನಾಟಕದಲ್ಲಿಯೇ ಇರುವಂಥ ಮುಂಡರಗಿ 'ಡಿ' ಕ್ಲಾಸಿನಲ್ಲಿದೆ. ಇದನ್ನು ತಾವು ಬೇಕಾದರೆ ಅಧ್ಯಯನ ಮಾಡಿಸಿ ದುರ್ದೈವದಿಂದ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಮುಂಡರಗಿ ಬಾಂಬೆ ಕರ್ನಾಟಕದಲ್ಲಿ ಮೂಲೆಗಿದ್ದೆವು. ಈಗ ನಮ್ಮನ್ನು ಕೊಪ್ಪಳದಲ್ಲಿ ಕೂಡಿಸಿದ್ದಾರೆ. ಆದರೆ ಅಲ್ಲಿ ಮುಂದುವರಿದದ್ದು ಎಂದು ಇದೆ. ಇದು ನಮ್ಮ ಪರಿಸ್ಥಿತಿ ಇರುವಂಥಾದ್ದು. ಅದನ್ನೂ ಕೂಡ ತಾವು ಸರಿಮಾಡಬೇಕು. ಮಾನ್ಯ ಶಿಕ್ಷಣ ಸಚಿವರು ದಯಮಾಡಿ ಮುಂಡರಗಿ 'ಡಿ' ಕ್ಲಾಸ್ ಇದೆಯಲ್ಲಾ, ಅಲ್ಲಿ ಕೂಡ ಸರಿಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಮುಂಡರಗಿ ಹಿಂದುಳಿದ ಪ್ರದೇಶ ಎಂದು ಎಲ್ಲರೂ ಒಪ್ಪಿಕೊಳ್ಳುತ್ತೇವೆ. 'ಡಿ' ಕ್ಲಾಸ್ ಎಂದು ಕನ್ಸಿಡರ್ ಮಾಡುವುದಕ್ಕೆ ನೀವು ಅತ್ಯಂತ ಕೊನೆಯಲ್ಲಿರುವವರು. ಬೇರೆಯವರಿಗಿಂತ ನಿಮಗೆ ಹೆಚ್ಚು ಕೊಡಬೇಕು. ಆದರೆ ದುರ್ದೈವ ಏನೆಂದರೆ ನಿಮ್ಮ ತಾಲ್ಲೂಕಿಗೆ ಬರುವುದಕ್ಕೆ ಒಬ್ಬರೂ ತಯಾರಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:— ನಮ್ಮ ತಾಲ್ಲೂಕಿಗೆ ಬಂದಮೇಲೆ ನೀವು ಕ್ಯಾಬಿನೇಟ್ ಮಂತ್ರಿಯಾದಿರಿ, ಗೃಹಸಚಿವರಾದಿರಿ. ಮುಂದೆ ಮುಖ್ಯಮಂತ್ರಿಗಳೂ ಕೂಡ ಆಗಬಹುದು. ನಾನು ದಯಮಾಡಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ನಿಜವಾಗಿಯೂ ನಮ್ಮ ಪರಿಸ್ಥಿತಿ ಏನಿದೆ ಎಂದರೆ ಮುಂಡರಗಿ ಮತದಾರರ ಕ್ಷೇತ್ರದ ಬಗ್ಗೆ ನಾನು ಹೇಳುತ್ತಿದ್ದೇನೆ. ಬಾಂಬೆ ಕರ್ನಾಟಕಕ್ಕೆ ಸೇರಿದರೂ ನಾವು 'ಡಿ' ಕ್ಲಾಸಿನಲ್ಲಿ ಇದ್ದೇವೆ. ಅದನ್ನೂ ಕೂಡ ಮಾನ್ಯ ಮಂತ್ರಿಗಳು ಕನ್ಸಿಡರ್ ಮಾಡಬೇಕೆಂದು ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

SRI B. SOMASHEKAR :— If you take only backwardness, instead of Districtwise, you can cover taluks like Gadag also. ಜಿಲ್ಲಾಮಟ್ಟಕ್ಕೆ ಹೋಗುವುದಕ್ಕೆ ಬದಲಾಗಿ ತಾಲ್ಲೂಕು ಮಟ್ಟಕ್ಕೆ ಹೋಗಿ ಆ ರೀತಿ ಬ್ಯಾಕ್ ವರ್ಡ್‌ನೆಸ್‌ನ್ನು ಐಡೆಂಟಿಫೈ ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರಿಗೆ ಆ ಭಾಗದ ಬಗ್ಗೆ ಬಹಳ ಅನುಭವವಿರುವುದರಿಂದ ಬಹಳ ಚೆನ್ನಾಗಿ 'ಎ.ಬಿ.ಸಿ.', ಎಂದು ವಿಭಾಗ ಮಾಡಿ ಹೇಳಿದ್ದಾರೆ. ಮೈಸೂರು ಭಾಗದವರು 'ಎ', ಬಾಂಬೆ ಕರ್ನಾಟಕದವರು 'ಬಿ', ಹೈದ್ರಾಬಾದ್ ಕರ್ನಾಟಕದವರು 'ಸಿ' ಎಂದು ಹೇಳಿದರು. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಡಿಗ್ರಿ ಕಾಲೇಜಿನ ಬಗ್ಗೆ ಹೇಳಿದರು,

ಮಂಡ್ಯಕ್ಕೂ ಡಿಗ್ರಿ ಕಾಲೇಜನ್ನು ಕೊಟ್ಟಿದ್ದಾರೆ. ನಮ್ಮ ಕೊಪ್ಪಳದಲ್ಲಿ ಇನ್ನೂರು ಮುನ್ನೂರು ವಿದ್ಯಾರ್ಥಿಗಳಿಗೆ ಅಡ್ಮಿಷನ್ ಇಲ್ಲದೆ ಹೊರಗೆ ಉಳಿದಿದ್ದಾರೆ, ನಮ್ಮ ಕೊಪ್ಪಳಕ್ಕೆ ಡಿಗ್ರಿ ಕಾಲೇಜನ್ನು ಕೊಡಬೇಕೆಂದು ನಾವು ಹೋರಾಟ ಮಾಡುತ್ತಿದ್ದೇವೆ. ಆದರೂ ನಮಗೆ ಡಿಗ್ರಿ ಕಾಲೇಜನ್ನು ಕೊಟ್ಟಿಲ್ಲ. ಈ ರೀತಿ ತಾರತಮ್ಯವೇಕೆ? ಎಲ್ಲಾ ಕಡೆಗೂ ಡಿಗ್ರಿ ಕಾಲೇಜನ್ನು ಕೊಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಒತ್ತಾಯಮಾಡಿ ಕೊಪ್ಪಳಕ್ಕೆ ಸರ್ಕಾರಿ ಡಿಗ್ರಿ ಕಾಲೇಜೊಂದನ್ನು ಕೊಡಿಸುತ್ತಾರೆ ಎಂದು ನಂಬಿರುತ್ತೇನೆ.

ಪ್ರಕಟಣೆ

ವಿಷಯ: ಸದನದೊಳಗೆ ಮೊಬೈಲ್ ದೂರವಾಣಿ ಬಳಸದೇ ಇರುವುದರ ಬಗ್ಗೆ

ಉಪಾಧ್ಯಕ್ಷರು :— ಒಂದು ವಿಶೇಷ ಸೂಚನೆ ಮೊಬೈಲ್ ದೂರವಾಣಿಯನ್ನು ಸದನದಲ್ಲಿ ಚಾಲು ಮಾಡಬಾರದೆಂದು ಪದೇ ಪದೆ ಸೂಚನೆ ಕೊಟ್ಟರೂ ಸಹ ಕೆಲವರು ಆ ಸೂಚನೆಯನ್ನು ಉಲ್ಲಂಘಿಸಿ ಮೊಬೈಲ್ ದೂರವಾಣಿಯನ್ನು ಆನ್ ಮಾಡುತ್ತಿರತಕ್ಕದ್ದು ಒಳ್ಳೆಯದಲ್ಲ. ಮತ್ತು ವಿಷಾದನೀಯ. ದಯಮಾಡಿ ಇನ್ನು ಮುಂದಾದರೂ ಆ ರೀತಿ ಆಗದಂತೆ ಎಲ್ಲಾ ಸದಸ್ಯರು ಸಹಕಾರ ನೀಡಬೇಕು. ಮುಂದೆ ಇದು ಮರುಕಳಿಸಿದರೆ ದಂಡವನ್ನು ಹಾಕುವ ಕೆಲಸ ಮಾಡಬೇಕಾಗುತ್ತದೆ. ಸದನವನ್ನು ಈಗ ಮುಂದೂಡುತ್ತಿದ್ದೇನೆ. ಮತ್ತೆ ಸದನವು ನಾಳೆ ಬೆಳಿಗ್ಗೆ 10-30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6 ಗಂಟೆ 43 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ದಿನಾಂಕ: 25ನೇ ಜುಲೈ ಮಾಹೆ 2001ರ ಬುಧವಾರ ದಂದು ಬೆಳಿಗ್ಗೆ 10-30 ಗಂಟೆಗೆ ಸೇರಲು ನಿರ್ಧರಿಸಿತು.)

+ ಈ ಚಿನ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸರ್ಕಾರಿ ಶಾಖಾ ಮುದ್ರಣಾಲಯ, ಬಮಕ, ಕೋಲಾರ - ೫೬೩೧೦೧

ಸರ್ಕಾರಿ ಶಾಖಾ ಮುದ್ರಣಾಲಯ, ಟಮಕ, ಕೋಲ್ಹಾರ - ೫೭೩೧೧೧